# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 532 (494) |
| ಸದಸ್ಯರ ಹೆಸರು | : | ಡಾ: ಚಂದ್ರಶೇಖರ ಬಸವರಾಜ ಪಾಟೀಲ (ಪದವೀಧರರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 14.08.2025 |
| ಉತ್ತರಿಸಬೇಕಾದವರು | : | ಸನ್ಮಾನ್ಯ ಮುಖ್ಯ ಮಂತ್ರಿಯವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಲ್ಲಿರುವ ಯೋಜನೆಗಳು ಯಾವುವು: | ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯು ಪರಿಶಿಷ್ಟ ಪಂಗಡದ ಸಮುದಾಯದವರ ಅಭಿವೃದ್ಧಿಗಾಗಿ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳ ವಿವರ:<br>1. ಶೈಕ್ಷಣಿಕ ಅಭಿವೃದ್ಧಿ<br>2. ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ<br>3. ಆರ್ಥಿಕ ಅಭಿವೃದ್ಧಿ<br>4. ಸಾಮಾಜಿಕ ಸಬಲೀಕರಣ<br>5. ಮೂಲಭೂತ ಸೌಕರ್ಯ ಒದಗಿಸುವುದು<br>ಯೋಜನೆಗಳ ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ.<br>ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು ಕಳೆದ 03 ವರ್ಷಗಳಿಂದ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳ ವಿವರಗಳನ್ನು **ಅನುಬಂಧ-2ರಲ್ಲಿ** ನೀಡಲಾಗಿದೆ.<br>ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಈ ಕೆಳಗಿನಂತಿದೆ<br>1) ಸ್ವಯಂ ಉದ್ಯೋಗ ಯೋಜನೆ<br>2) ಉದ್ಯಮಶೀಲತಾ ಯೋಜನೆ<br>3) ಸ್ವಾವಲಂಭಿ ಸಾರಥಿ ಯೋಜನೆ<br>4) ಮೈಕ್ರೋ ಕ್ರೆಡಿಟ್ ಯೋಜನೆ<br>5) ಭೂ ಒಡೆತನ ಯೋಜನೆ<br>6) ಗಂಗಾ ಕಲ್ಯಾಣ ಯೋಜನೆ |
| ಆ) | ಕಳೆದ 2 ವರ್ಷಗಳಲ್ಲಿ ಸದರಿ ಯೋಜನೆಗಳಿಗೆ ಬಿಡುಗಡೆಯಾದ ಅನುದಾನ ಎಷ್ಟು? | ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯು ಕಳೆದ 2 ವರ್ಷಗಳಲ್ಲಿ ರಾಜ್ಯ ಮತ್ತು ಜಿಲ್ಲಾ ವಲಯ ಯೋಜನೆಗಳಡಿ ಹಂಚಿಕೆ ಮತ್ತು ಬಿಡುಗಡೆ ಮಾಡಲಾದ ಅನುದಾನದ ವಿವರ ಈ ಕೆಳಕಂಡಂತಿದೆ.<br>(ರೂ. ಲಕ್ಷಗಳಲ್ಲಿ)<br><table><tr><th>ಕ್ರ.ಸಂ</th><th>ವರ್ಷ</th><th>ಹಂಚಿಕೆ</th><th>ಬಿಡುಗಡೆ</th></tr><tr><td>1</td><td>2023-24</td><td>195536.58</td><td>188431.71</td></tr><tr><td>2</td><td>2024-25</td><td>186520.68</td><td>169106.08</td></tr></table>ಕಾರ್ಯಕ್ರಮವಾರು ವಿವರವನ್ನು **ಅನುಬಂಧ-3ರಲ್ಲಿ** ನೀಡಲಾಗಿದೆ. |

ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಕ್ಕೆ ಕಳೆದ 02 ವರ್ಷಗಳಲ್ಲಿ ಸದರಿ ಯೋಜನೆಗಳಿಗೆ ಬಿಡುಗಡೆಯಾದ ಅನುದಾನದ ವಿವರ ಈ ಕೆಳಕಂಡಂತಿದೆ.

(ರೂ. ಕೋಟಿಗಳಲ್ಲಿ)

| **ವರ್ಷ** | **ಮಂಜೂರಾದ ಅನುದಾನ** | **ಬಿಡುಗಡೆಯಾದ ಅನುದಾನ** |
|---|---|---|
| 2023-24 | 154.00 | 154.00 |
| 2024-25 | 149.00 | 149.00 |

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮಕ್ಕೆ ಕಳೆದ 2 ವರ್ಷದಿಂದ ವಿವಿಧ ಯೋಜನೆಗಳಲ್ಲಿ ಸೌಲಭ್ಯ ಪಡೆದಿರುವ ಹಾಗೂ ವಿವಿಧ ಯೋಜನೆಗಳಿಗೆ ವೆಚ್ಚವಾಗಿರುವ ಅನುದಾನ ವಿವರ ಈ ಕೆಳಗಿನಂತಿದೆ.

(ರೂ. ಕೋಟಿಗಳಲ್ಲಿ)

| **ಕ್ರ ಸಂ** | **ಯೋಜನೆಗಳು** | **2023-24** | | **2024-25** | |
|---|---|---|---|---|---|
| | | **ಭೌತಿಕ ಗುರಿ** | **ಆರ್ಥಿಕ ಗುರಿ** | **ಭೌತಿಕ ಗುರಿ** | **ಆರ್ಥಿಕ ಗುರಿ** |
| 1 | ಸ್ವಯಂ-ಉದ್ಯೋಗ ಯೋಜನೆ | 200 | 2.00 | 300 | 3.00 |
| 2 | ಉದ್ಯಮಶೀಲತಾ ಯೋಜನೆ | 100 | 2.00 | 150 | 3.00 |
| 3 | ಸ್ವಾವಲಂಭಿ ಸಾರಥಿ ಯೋಜನೆ | 100 | 4.00 | 100 | 4.00 |
| 4 | ಮೈಕ್ರೋ ಕ್ರೇಡಿಟ್ ಯೋಜನೆ | 4000 | 10.00 | 4000 | 10.00 |
| 5 | ಗಂಗಾ ಕಲ್ಯಾಣ ಯೋಜನೆ | 123 | 5.00 | 0.00 | 0.00 |
| 6 | ಭೂ ಒಡತನ ಯೋಜನೆ | 50.00 | 10.00 | 50.00 | 10.00 |
| 7 | ಆಡಳಿತ ಮತ್ತು ಇತರೆ | 0.00 | 3.00 | 0.00 | 5.00 |
| **ಒಟ್ಟು** | | **4575** | **36.00** | **4600** | **35.00** |

STW/SECB/STP/327/2025

(ಸಿದ್ದರಾಮಯ್ಯ)
ಮುಖ್ಯಮಂತ್ರಿ

# ಅನುಬಂಧ-1

## ಡಾ: ಚಂದ್ರಶೇಖರ ಬಸವರಾಜ ಪಾಟೀಲ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 494 (532) ಕ್ಕೆ ಮಾಹಿತಿ

## ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಯಲ್ಲಿರುವ ಯೋಜನೆಗಳ ವಿವರ

- **ಅನುಷ್ಠಾನಗೊಳಿಸುತ್ತಿರುವ ಪ್ರಮುಖ ಕಾರ್ಯಕ್ರಮಗಳ ವಿವರ:**

1. ಶೈಕ್ಷಣಿಕ ಅಭಿವೃದ್ಧಿ
2. ಮೂಲಭೂತ ಸೌಕರ್ಯ ಒದಗಿಸುವುದು
3. ಆರ್ಥಿಕ ಅಭಿವೃದ್ಧಿ
4. ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ
5. ಸಾಮಾಜಿಕ ಸಬಲೀಕರಣ

**1. ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು:**

**ಅ) ವಿದ್ಯಾರ್ಥಿನಿಲಯಗಳು/ವಸತಿ ಶಾಲೆಗಳ ನಿರ್ವಹಣೆ:**

ಪ.ಪಂಗಡ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಪ್ರೋತ್ಸಾಹ ನೀಡಲು ವಾಲ್ಮೀಕಿ ಆಶ್ರಮ ಶಾಲೆ/ವಸತಿ ಶಾಲೆ/ವಿದ್ಯಾರ್ಥಿನಿಲಯಗಳನ್ನು ನಿರ್ವಹಣೆ ಮಾಡಲಾಗುತ್ತಿದೆ. ವಿವರ ಈ ಕೆಳಕಂಡಂತಿದೆ.

| ಕ್ರ.ಸಂ. | ಸಂಸ್ಥೆಗಳ ವಿವರ | ಪ.ಪಂಗಡ |
|---|---|---|
| 1. | ವಾಲ್ಮೀಕಿ ಆಶ್ರಮ ಶಾಲೆ | 119 |
| 2. | ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯ | 135 |
| 3. | ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯ | 135 |
| 4. | ಅನುದಾನಿತ ವಿದ್ಯಾರ್ಥಿನಿಲಯ | 25 |
| | **ಒಟ್ಟು** | **414** |

- 46755 ಪ.ಪಂಗಡದ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಿದೆ.

**ನಿಲಯಾರ್ಥಿಗಳಿಗೆ ಒದಗಿಸುತ್ತಿರುವ ಸೌಲಭ್ಯಗಳ ವಿವರ**

| ವಿವರ | ವಾಲ್ಮೀಕಿ ಆಶ್ರಮ ಶಾಲೆ | ಮೆ.ಪೂರ್ವ ವಿ.ನಿಲಯ | ಮೆ.ನಂತರ ವಿ.ನಿಲಯ | ಖಾಸಗಿ ವಿದ್ಯಾರ್ಥಿನಿಲಯಗಳು | |
|---|---|---|---|---|---|
| | | | | ಮೆ.ಪೂರ್ವ | ಮೆ.ನಂತರ |
| ಭೋಜನ ವೆಚ್ಚ (ಮಾಸಿಕ) | 1,650/- | 1,750/- | 1,850/- | 1,350/- | 1,450/- |

**ಇತರೆ ಸೌಲಭ್ಯಗಳು**

ಸಮವಸ್ತ್ರ (2ಜೊತೆ).ಪಠ್ಯ/ನೋಟ್ ಪುಸ್ತಕ, ಶುಚಿ ಸಂಭ್ರಮ ಕಿಟ್, ಶೂ, ಕ್ಷೌರ ವೆಚ್ಚ, ದಿನಪತ್ರಿಕೆ/ Magazine ವೈದ್ಯಕೀಯ ವೆಚ್ಚ, ಸ್ವಚ್ಛತೆ ವೆಚ್ಚ, ಮಂಚ, ಹಾಸಿಗೆ, ಹೊದಿಕೆ, ದಿಂಬು, ಜಮಖಾನ, ಕ್ರೀಡಾ ಸಾಮಗ್ರಿಗಳು ಹಾಗೂ ಇತರೆ ಮೂಲಭೂತ ಸೌಲಭ್ಯಗಳು.

## ವಿದ್ಯಾರ್ಥಿನಿಲಯ ಕಟ್ಟಡಗಳ ವಿವರ

| ಕ್ರ.ಸಂ | ವಿವರ | ಪ.ಪAಗಡ |
|---|---|---|
| 1. | ಒಟ್ಟು ವಿದ್ಯಾರ್ಥಿನಿಲಯಗಳ ಸಂಖ್ಯೆ | 389 |
| 2. | ಸ್ವಂತ ಕಟ್ಟಡಗಳ ಸಂಖ್ಯೆ | 330 |
| 3. | ಬಾಡಿಗೆ ಕಟ್ಟಡಗಳ ಸಂಖ್ಯೆ | 59 |
| 4. | ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಸಂಖ್ಯೆ | 45 |
| 5. | ನಿವೇಶನ ಲಭ್ಯತೆ | 14 |
| 6. | ನಿವೇಶನ ರಹಿತ ವಿ.ನಿ ಸಂಖ್ಯೆ | 0 |

**ಆ) ವಿದ್ಯಾರ್ಥಿವೇತನ:**

### ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ (ಡೇ ಸ್ಕಾಲರ್)

ವಿದ್ಯಾರ್ಥಿನಿಲಯಗಳಲ್ಲಿ ಇಲ್ಲದೇ ಇರುವ ಪರಿಶಿಷ್ಟ ಪಂಗಡದ 1 ರಿಂದ 8ನೇ ತರಗತಿಯವರೆಗಿನ ವಿದ್ಯಾರ್ಥಿಗಳು ತಮ್ಮ ವ್ಯಾಸಂಗವನ್ನು ಮುಂದುವರೆಸುವಂತೆ ಪ್ರೋತ್ಸಾಹಿಸಲು ಹಾಗೂ ವಿದ್ಯಾಭ್ಯಾಸದ ನಡುವೆ ಶಾಲೆ ಬಿಡುವುದನ್ನು ತಪ್ಪಿಸಲು ಮತ್ತು ಪಾಲಕರು ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಉತ್ತೇಜಿಸಲು ಮೆಟ್ರಿಕ್‌ಪೂರ್ವ ವಿದ್ಯಾರ್ಥಿವೇತನ ಮಂಜೂರು ಮಾಡಲಾಗುತ್ತಿದೆ.

| ತರಗತಿ | ಬಾಲಕರು | ಬಾಲಕಿಯರು |
|---|---|---|
| 1 ರಿಂದ 5 | 1000/- | 1100/- |
| 6 ರಿಂದ 7 | 1150/- | 1250/- |
| 8ನೇ ತರಗತಿ | 1250/- | 1350/- |

### ಮೆಟ್ರಿಕ್ ಪೂರ್ವ 9 ಮತ್ತು 10ನೇ ತರಗತಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ - ಕೇಂದ್ರ ಪುರಸ್ಕೃತ ಯೋಜನೆ

| ತರಗತಿ | ಬಾಲಕರು | ಬಾಲಕಿಯರು |
|---|---|---|
| 9 ರಿಂದ 10 | 3000/- | 3000/- |

### ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ (ವಾರ್ಷಿಕ)

| ಗುಂಪು | ಕೋರ್ಸ್‌ಗಳು | ಮಾಹೆಯಾನ | ನಿಲಯಾರ್ಥಿಗಳು | | | ಡೇಸ್ಕಾಲರ್ಸ್ | |
|---|---|---|---|---|---|---|---|
| | | | ಕೇಂದ್ರ | ರಾಜ್ಯ | ಒಟ್ಟು | ಮಾಹೆಯಾನ | ವಾರ್ಷಿಕ |
| I. | Bachelor, Master Degree, Mphil/PhD degree leading to Degree, PG Diploma in professional courses in various streams | 1200 | 14400/- | 6.600/- | 21.000/- | 550 | 6600/- |
| II. | All non-professional recognized courses leading to a Bachelor, Master Degree, MPhil/PhD degree not covered under Group I in Arts, Science and Commerce lik BA/B.Sc/B.com or MA/MSc/M.COM | 820 | 9840/- | 11.160/- | 21.000/- | 530 | 6360/- |

| | | | | | | | |
|---|---|---|---|---|---|---|---|
| III. | Vocational stream, ITI courses, 3 year diploma courses in Polytechnics, etc. | 570 | 6840/- | 14,160/- | 21,000/- | 300 | 3600/- |
| IV. | All post-matriculation level non-degree courses for which *entrance qualification is* High School (Class X), e.g. senior secondary certificate (class XI and XII). | 380 | 4560/- | 16,440/- | 21,000/- | 230 | 2760/- |

**ಇ) ಪ್ರೋತ್ಸಾಹಧನ ಯೋಜನೆ: ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆ:**

ಪ್ರಥಮ ಪ್ರಯತ್ನದಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಈ ಕೆಳಗಿನಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

| ಕೋರ್ಸಿನ ವಿವರ | | ಪ್ರೋತ್ಸಾಹಧನ (ರೂ.ಗಳಲ್ಲಿ) |
|---|---|---|
| ಎಸ್.ಎಸ್.ಎಲ್.ಸಿ | ಶೇ 60 ರಿಂದ ಶೇ 75 | 7,000/- |
| | ಶೇ 75 ಕ್ಕಿಂತ ಮೇಲ್ಪಟ್ಟು | 15,000/ |
| ಪಿ.ಯು.ಸಿ/ ಡಿಪ್ಲೊಮ | | 20,000/- |
| ಪದವಿ | | 25,000/- |
| ಸ್ನಾತಕೋತ್ತರ ಪದವಿ | | 30,000/- |
| ವೃತ್ತಿಪರ ಪದವಿ (ವೈದ್ಯಕೀಯ/ತಾಂತ್ರಿಕ/ಕೃಷಿ/ಪಶುವೈದ್ಯಕೀಯ) | | 35,000/- |
| ವಿಶ್ವವಿದ್ಯಾಲಯ ಮಟ್ಟದಲ್ಲಿ PG Courses ವಿವಿಧ ವಿಷಯಗಳಲ್ಲಿ ಗಳಲ್ಲಿ 1 ರಿಂದ 5 ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ | | 50,000/- |

**ಈ) ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ನಗದು ಪ್ರಶಸ್ತಿ:**

ಸ್ವಾತಾಂತ್ರ್ಯ ಹೋರಟದ ಭಾಗವಾದ ಹಲಗಲಿ ಬೇಡರ ಬಂಡಾಯದಲ್ಲಿ ಹುತಾತ್ಮರಾದ ಜಡಗ ಮತ್ತು ಬಾಲ ಇವರ ಹೆಸರಿನಲ್ಲಿ ಪ್ರತಿ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದ ಎಸ್.ಟಿ ವಿದ್ಯಾರ್ಥಿಗಳಿಗೆ ರೂ.1.00 ಲಕ್ಷ ನಗದು ಪ್ರಶಸ್ತಿ ನೀಡಲಾಗುತ್ತಿದೆ.

**ಉ) ಪ್ರತಿಷ್ಠಿತ ಶಾಲೆಗಳಲ್ಲಿ ಪ್ರವೇಶಾವಕಾಶ:**

ರಾಜ್ಯ ಮಟ್ಟದ ಸಮಿತಿಯಿಂದ ಆಯ್ಕೆ ಮಾಡಲಾದ ಪ್ರತಿಷ್ಠಿತ ಶಾಲೆಗಳಿಗೆ ಪ್ರತಿಭಾವಂತ ಪ.ಪಂಗಡ ವಿದ್ಯಾರ್ಥಿಗಳನ್ನು ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಆಯ್ಕೆ ಸಮಿತಿ ಮೂಲಕ ಆಯ್ಕೆಗೊಂಡು ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ನೀಡಲಾಗುತ್ತಿದೆ.

**ಊ) "ಪ್ರಬುದ್ಧ" - ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ಶಿಕ್ಷಣ ಪಡೆಯಲು ಧನಸಹಾಯ:**

ಈ ಯೋಜನೆಯಡಿ ಸರ್ಕಾರದಿಂದ ಅನುಮೋದಿಸಿರುವ ವಿದೇಶದಲ್ಲಿರುವ ವಿಶ್ವವಿದ್ಯಾಲಯಗಳು/ ಶಿಕ್ಷಣ ಸಂಸ್ಥೆಗಳಲ್ಲಿ ಸ್ನಾತಕೋತ್ತರ ಪದವಿ ಮತ್ತು ಪಿ.ಹೆಚ್.ಡಿ ಪದವಿಗಳಲ್ಲಿನ ವಿಷಯಗಳನ್ನು ವ್ಯಾಸಾಂಗ ಮಾಡಲು ಆಯ್ಕೆಯಾದವರಿಗೆ ಆರ್ಥಿಕ ಸಹಾಯವನ್ನು ಒದಗಿಸಲಾಗವುದು.

**ಖ) ರಾಷ್ಟ್ರೀಯ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ಧನಸಹಾಯ:**

ರಾಷ್ಟ್ರೀಯ ಶಿಕ್ಷಣ ಸಂಸ್ಥೆಗಳಾದ ಐ.ಐ.ಟಿ/ಐ.ಐ.ಎಂ/ಐ.ಎಂ.ಐ/ಎನ್.ಐ.ಟಿ/ಇತ್ಯಾದಿ ಸಂಸ್ಥೆಗಳಲ್ಲಿ ಪ್ರವೇಶ ಪಡೆಯುವ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಒಂದು ಭಾರಿಗೆ ರೂ.2.00 ಲಕ್ಷ ಸಹಾಯಧನವನ್ನು ನೀಡಲಾಗುತ್ತಿದೆ.

ಸಿ.ಎ/ಐ.ಸಿ.ಡಬ್ಲ್ಯೂ.ಎ/ಕಂಪನಿ ಸೆಕ್ರೆಟರಿ ಪರೀಕ್ಷೆಗಳಲ್ಲಿ ತೇರ್ಗಡೆಯಾದ ವಿದ್ಯಾರ್ಥಿಗಳಿಗೆ ಕ್ರಮವಾಗಿ ರೂ.50,000/- ಮತ್ತು ರೂ.1.00 ಲಕ್ಷಗಳನ್ನು ಮಂಜೂರು ಮಾಡಲಾಗುತ್ತಿದೆ.

**ಎ) ವಿದ್ಯಾವಂತ ಯುವಕ/ಯುವತಿಯರಿಗೆ ಶೈಕ್ಷಣಿಕ ಪ್ರೋತ್ಸಾಹಧನ ಮತ್ತು ನಿರುದ್ಯೋಗಿ ಜೀವನ ಭತ್ಯೆ:-**

ಪರಿಶಿಷ್ಟ ಪಂಗಡದವರಾದ ಜೇನು ಕುರುಬ ಹಾಗೂ ಕೊರಗ ಸಮುದಾಯದ ವಿದ್ಯಾವಂತ ಯುವಕ/ಯುವತಿಯರಿಗೆ ಶೈಕ್ಷಣಿಕ ಪ್ರೋತ್ಸಾಹಧನ ಮತ್ತು ನಿರುದ್ಯೋಗಿ ಜೀವನ ಭತ್ಯೆಯನ್ನು, ಮೈಸೂರು, ಚಾಮರಾಜನಗರ, ಕೊಡಗು, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಮೂಲನಿವಾಸಿಗಳಾದ ಪರಿಶಿಷ್ಟ ಪಂಗಡಗಳಾದ ಜೇನುಕುರುಬ ಹಾಗೂ ಕೊರಗ ಸಮುದಾಯದ ಯುವಕ/ಯುವತಿಯರಿಗೆ ಶೈಕ್ಷಣಿಕ ಪ್ರೋತ್ಸಾಹಧನ ಮತ್ತು ನಿರುದ್ಯೋಗಿಗಳಿಗೆ ಜೀವನ ಭತ್ಯೆಗಳನ್ನು ನೀಡಲಾಗುತ್ತಿದೆ. ವಿವರ ಈ ಕೆಳಕಂಡಂತಿದೆ.

| ಕ್ರ.ಸಂ | ವಿದ್ಯಾರ್ಹತೆ | ಶೈಕ್ಷಣಿಕ ಪ್ರೋತ್ಸಾಹ ಧನ ವಾರ್ಷಿಕ ರೂ.ಗಳಲ್ಲಿ | ಮಾಸಿಕ ನಿರುದ್ಯೋಗಿ ಜೀವನ ಭತ್ಯೆ |
|---|---|---|---|
| 1 | ಎಸ್.ಎಸ್.ಎಲ್.ಸಿ | 10,000/- | 2,000/- |
| 2 | ಪಿ.ಯು.ಸಿ ಮತ್ತು ತತ್ಸಮಾನ ಕೋರ್ಸುಗಳಿಗೆ ಪ್ರತಿ ವರ್ಷಕ್ಕೆ | 12,000/- | 2,500/- |
| 3 | ಎಲ್ಲಾ ಪದವಿ ಕೋರ್ಸುಗಳ ಪ್ರತಿ ವರ್ಷಕ್ಕೆ | 15,000/- | 3,500/- |
| 4 | ಎಲ್ಲಾ ಸ್ನಾತಕೋತ್ತರ ಕೋರ್ಸ್ಗಳ ಪ್ರತಿ ವರ್ಷಕ್ಕೆ | 18,000/- | 4,500/- |

**ಐ) ಕೇಂದ್ರಿಯ ಅನುದಾನದಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮಗಳು:- (ಕೇಂದ್ರ ಸರ್ಕಾರದ ಯೋಜನೆ)**

ಕೇಂದ್ರ ಸರ್ಕಾರದ ಅನುದಾನದಿಂದ ಸ್ವಯಂ ಸೇವಾ ಸಂಸ್ಥೆಗಳ ಮೂಲಕ ಈ ಕೆಳಕಂಡ ಕಾರ್ಯಕ್ರಮಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. 1) ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ಶಾಲೆಗಳು, 2) ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಸತಿ ರಹಿತ ಶಾಲೆಗಳು, 3) 10 ಹಾಸಿಗೆಗಳ ಆಸ್ಪತ್ರೆ/ಡಿಸ್ಪೆನ್ಸ್ರಿ, 4) ಸಂಚಾರಿ ಆರೋಗ್ಯ ಘಟಕ, 5) ವಿವಿಧ ವೃತ್ತಿಗಳಲ್ಲಿ ತರಬೇತಿ. ಸ್ವಯಂ ಸೇವಾ ಸಂಸ್ಥೆಗಳು ಮೇಲ್ಕಾಣಿಸಿದ ಯಾವುದೇ ಯೋಜನೆ ಹಮ್ಮಿಕೊಳ್ಳಬಯಸಿದ್ದಲ್ಲಿ, ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿಕಳುಹಿಸಲಾಗುವುದು. ಕೇಂದ್ರ ಸರ್ಕಾರವು ಹಣ ಲಭ್ಯತೆಗನುಗುಣವಾಗಿ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಲಾಗುವುದು.

**ಐ) ಪರಿಶಿಷ್ಟ ಪಂಗಡದ ಆದಿವಾಸಿ ಪಂಗಡಕ್ಕೆ ಸೇರಿದ ಜೇನುಕುರುಬ ಮತ್ತು ಕೊರಗ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ಧನ:-**

ಪರಿಶಿಷ್ಟ ಪಂಗಡದ ಆದಿವಾಸಿ ಪಂಗಡಕ್ಕೆ ಸೇರಿದ ಜೇನುಕುರುಬ ಮತ್ತು ಕೊರಗ ಜನಾಂಗಕ್ಕೆ ಸೇರಿದ 7ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರೂ.2,500/- ಮತ್ತು 10ನೇ ತರಗತಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ರೂ.5,000/- ಗಳ ಪ್ರೋತ್ಸಾಹ ಧನವನ್ನು ನೀಡಲಾಗುತ್ತಿದೆ.

**2. ಮೂಲಭೂತ ಸೌಕರ್ಯ ಒದಗಿಸುವ ಕಾರ್ಯಕ್ರಮಗಳು:**

**ಅ) ಪ.ಪಂಗಡದವರ ಕಾಲೋನಿಗಳಲ್ಲಿ:-**

ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಪಂಗಡದ ಕಾಲೋನಿ/ ಹಾಡಿಗಳಲ್ಲಿ ಮೂಲಭೂತ ಸೌಕರ್ಯಗಳಾದ ಸಿ.ಸಿ ರಸ್ತೆ. ಚರಂಡಿ. ಕುಡಿಯುವ ನೀರು ಇತ್ಯಾದಿ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ.

**ಆ) ಮೂಲನಿವಾಸಿ ಜನಾಂಗದ ಅಭಿವೃದ್ಧಿ ಯೋಜನೆ:- (ಕೇಂದ್ರ ಸರ್ಕಾರದ ಯೋಜನೆ)**

ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಕೊಡಗು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ವಾಸಿಸುತ್ತಿರುವ ಕೊರಗ ಮತ್ತು ಜೇನುಕುರುಬ ಜನಾಂಗವನ್ನು ಮೂಲನಿವಾಸಿ ಜನಾಂಗದವರೆಂದು ಗುರುತಿಸಲಾಗಿದೆ. ರಾಜ್ಯದಲ್ಲಿ ಕೊರಗ ಜನಾಂಗದವರ ಒಟ್ಟು ಸಂಖ್ಯೆ:13007 ಇದ್ದು, 3007 ಕುಟುಂಬಗಳು ಇರುತ್ತವೆ. ಅದೇ ರೀತಿ ಜೇನುಕುರುಬರ ಜನಸಂಖ್ಯೆ 44040 ಇದ್ದು, 12485 ಕುಟುಂಬಗಳು ಇರುತ್ತವೆ. ಈ ಮೂಲನಿವಾಸಿ ಜನಾಂಗದವರ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ಮಂಜೂರು ಮಾಡುವ ಅನುದಾನದಲ್ಲಿ 1) ವಸತಿ ರಹಿತರಿಗೆ ವಾಸದ ಮನೆಗಳ ನಿರ್ಮಾಣ. 2) ಆರ್ಥಿಕ ಉನ್ನತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

**ಇ) ಮೂಲನಿವಾಸಿ ಜನಾಂಗದವರಿಗೆ ವಸತಿ ಸೌಕರ್ಯ ಯೋಜನೆ:-**

ದಕ್ಷಿಣ ಕನ್ನಡ, ಉಡುಪಿ, ಕೊಡಗು, ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಜಿಲ್ಲೆಗಳಲ್ಲಿನ ನೈಜ ದುರ್ಬಲ ಬುಡಕಟ್ಟು ಸಮುದಾಯದ ಜನಾಂಗದವರಾದ ಕೊರಗ ಮತ್ತು ಜೇನುಕುರುಬ ಜನಾಂಗದವರಲ್ಲಿ ಮನೆ ಇಲ್ಲದವರಿಗೆ ಪ್ರತಿ ಮನೆಗೆ ರೂ.4.50 ಲಕ್ಷಗಳಲ್ಲಿ (2021-22) ಮನೆ ನಿರ್ಮಿಸಿ ಕೊಡುವ ಯೋಜನೆ ಹಮ್ಮಿಕೊಳ್ಳಲಾಗಿದೆ.

**ಈ) ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳ (ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ) ಅಧಿನಿಯಮ 2006 ಮತ್ತು ನಿಯಮಗಳು 2008 - ಅನುಷ್ಠಾನಗೊಳಿಸುವ ಬಗ್ಗೆ:-**

ತಲಾತಲಾಂತರದಿಂದ ಅರಣ್ಯಗಳಲ್ಲಿ ವಾಸಿಸುತ್ತಿರುವ ಅನುಸೂಚಿತ ಬುಡಕಟ್ಟು ಮತ್ತು ಇತರೆ ಪಾರಂಪರಿಕ ಅರಣ್ಯ ವಾಸಿಗಳಿಗೆ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡಲು ಈ ಕಾಯ್ದೆಯನ್ನು ಕೇಂದ್ರ ಸರ್ಕಾರವು ಜಾರಿಗೆ ತಂದಿರುತ್ತದೆ. ಈ ಕಾಯ್ದೆಯ ಪ್ರಕಾರ ನಿಗಧಿಪಡಿಸಿದ ನಿಯಮಗಳ ಪ್ರಕಾರ ಅರ್ಹರಾದವರಿಗೆ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿರುವ ಜಿಲ್ಲಾ ಮಟ್ಟದ ಸಮಿತಿಯಲ್ಲಿ ಪರಿಶೀಲಿಸಿ ಅರ್ಹ ಅರಣ್ಯ ವಾಸಿಗಳಿಗೆ ಅರಣ್ಯ ಹಕ್ಕುಗಳನ್ನು ಮಾನ್ಯ ಮಾಡುವ ಹಕ್ಕು ಪತ್ರಗಳನ್ನು ನೀಡಲಾಗುತ್ತಿದೆ.

## 3. ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು

### ಅ) ವಾಲ್ಮೀಕಿ/ಸಮುದಾಯ ಭವನಗಳು

ಪರಿಶಿಷ್ಟ ಪಂಗಡದ ಸಮುದಾಯದ ಉಪಯೋಗಕ್ಕಾಗಿ ಅಂದರೆ ಸದರಿ ಸಮುದಾಯದ ಸಭೆ ಸಮಾರಂಭಗಳಿಗೆ ಮತ್ತು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳಿಗಾಗಿ ಸಮುದಾಯದ ಸದುಪಯೋಗಕ್ಕಾಗಿ ಬಳಸಿಕೊಳ್ಳಲು ಗ್ರಾಮ, ಹೋಬಳಿ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ವಾಲ್ಮೀಕಿ/ಸಮುದಾಯ ಭವನಗಳನ್ನು ಈ ಕೆಳಗಿನ ಘಟಕ ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ.

- ಗ್ರಾಮ ಮಟ್ಟ (ರೂ.20.00 ಲಕ್ಷ)
- ಹೋಬಳಿ ಮಟ್ಟ (ರೂ.75.00 ಲಕ್ಷ)
- ತಾಲ್ಲೂಕು ಮಟ್ಟ (ರೂ.200.00 ಲಕ್ಷ)
- ಜಿಲ್ಲಾ ಮಟ್ಟ (ರೂ.400.00 ಲಕ್ಷ)
- ರಾಜ್ಯ ಮಟ್ಟ (ರೂ.500.00 ಲಕ್ಷ)

### ಆ) ಪರಿಶಿಷ್ಟ ಪಂಗಡದ ಸಂಘ-ಸಂಸ್ಥೆಗಳು/ಧಾರ್ಮಿಕ ಸಂಸ್ಥೆಗಳ ವತಿಯಿಂದ ನಡೆಸಲಾಗುತ್ತಿರುವ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ಶಾಲಾ/ ಕಾಲೇಜು/ ವಿದ್ಯಾರ್ಥಿನಿಲಯ/ ಸಮುದಾಯ ಭವನಗಳನ್ನು ನಿರ್ಮಿಸಲು ಧನಸಹಾಯ ನೀಡಲಾಗುತ್ತಿದೆ.

- ಪಟ್ಟಣ ಪಂಚಾಯಿತಿ/ಗ್ರಾಮ ಪಂಚಾಯಿತಿ – ರೂ.10.00 ಲಕ್ಷ
- ತಾಲ್ಲುಕು ಕೇಂದ್ರ ಸ್ಥಾನ - ರೂ.25.00 ಲಕ್ಷ
- ಜಿಲ್ಲಾ ಕೇಂದ್ರ ಸ್ಥಾನ - ರೂ.50.00 ಲಕ್ಷ

### ಇ) ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಬಡ್ಡಿ ಸಹಾಯಧನ ಕಾರ್ಯಕ್ರಮ

ಪರಿಶಿಷ್ಟ ಪಂಗಡದ ಉದ್ದಿಮೆದಾರರು ಎಂ.ಸ್.ಎಂ.ಇ ಘಟಕಗಳನ್ನು ಸ್ಥಾಪಿಸಲು ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ ಹಾಗೂ ರಾಷ್ಟ್ರೀಕೃತ/ ಜಿಲ್ಲಾ ಸಹಕಾರಿ ಬ್ಯಾಂಕ್/ಅಪೆಕ್ಸ್ ಸಹಕಾರಿ ಬ್ಯಾಂಕ್‌ಗಳಿಂದ ಪಡೆಯುವ ಸಾಲಕ್ಕೆ 4% ಬಡ್ಡಿ ಸಹಾಯಧನ ಸೌಲಭ್ಯವನ್ನು ಒದಗಿಸಲಾಗುತ್ತಿದೆ.

2021-22ನೇ ಸಾಲಿನಿಂದ ವಾಣಿಜ್ಯ ಮತ್ತು ವ್ಯಾಪಾರ ಚಟುವಟಿಕೆಗಳಾದ ಮಳಿಗೆ/ಡೀಲರ್ ಶಿಪ್/ ಫ್ರಾಂಚೈಸಿ ಮತ್ತು ಹೋಟೆಲ್ ಉದ್ಯಮಗಳನ್ನು ಪ್ರಾರಂಭಿಸಲು ಸಹ 4% ಬಡ್ಡಿ ಸಹಾಯಧನ ಯೋಜನೆಯನ್ನು ವಿಸ್ತರಿಸಿದ್ದು, ಈ ಯೋಜನೆಯಡಿ ಗರಿಷ್ಟ ರೂ.1.00 ಕೋಟಿವರೆಗೆ ರಾಷ್ಟ್ರೀಕೃತ ಮತ್ತು ವಾಣಿಜ್ಯ ಶೆಡ್ಯೂಲ್ಡ್ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಗರಿಷ್ಠ ಸಾಲದ ಮರುಪಾವತಿ ಅವಧಿ 5 ವರ್ಷ.

### ಈ) ಪರಿಶಿಷ್ಟ ಪಂಗಡದ ಉದ್ಯಮಿಗಳಿಗೆ ಸಾಲ ಮಂಜೂರಾತಿಗೆ ಸಮಾನಾಂತರ ಖಾತ್ರಿ (Collateral Security) ಒದಗಿಸುವುದು.

ಕೆ.ಎಸ್.ಎಫ್.ಸಿ ಯಿಂದ ಪ.ಪಂಗಡದವರಿಗೆ ಮಂಜೂರು ಮಾಡಲು ಸಾಲಕ್ಕೆ ಗರಿಷ್ಠ ರೂ.2.00 ಕೋಟಿಗಳವರೆಗೆ (Collateral Security) ಸಮಾನಾಂತರ ಖಾತ್ರಿಯನ್ನು ಸರ್ಕಾರದಿಂದ ಒದಗಿಸಲಾಗುತ್ತಿದೆ. ಈ ಸೌಲಭ್ಯವನ್ನು ಕೆ.ಎಸ್.ಎಫ್.ಸಿ Collateral Security ನಿಯಮಗಳಂತೆ ಸರ್ಕಾರದಿಂದ ಒದಗಿಸಲಾಗುತ್ತಿದೆ. ಉಳಿದ ಮೊತ್ತಕ್ಕೆ ಫಲಾನುಭವಿಗಳು ಸಮಾನಾಂತರ ಖಾತ್ರಿಯನ್ನು ಒದಗಿಸಬೇಕಾಗುತ್ತದೆ.

ರಾಷ್ಟ್ರೀಕೃತ ಬ್ಯಾಂಕ್‌ಗಳಿಂದ ಸಾಲ ಪಡೆಯುವವರಿಗೆ ಭಾರತ ಸರ್ಕಾರದ ಮಾರ್ಗಸೂಚಿಯಂತೆ Collateral Security ಒದಗಿಸಲು ವಿನಾಯಿತಿ ನೀಡಲಾಗಿದೆ.

## ಉ) ಪ್ರಧಾನ ಮಂತ್ರಿ ಆದಿ ಆದರ್ಶ ಗ್ರಾಮ ಯೋಜನೆ

2021-22ನೇ ಸಾಲಿನ ಪ್ರಧಾನ ಮಂತ್ರಿ ಆದಿ ಆದರ್ಶ ಗ್ರಾಮ ಯೋಜನಾ (ಪಿ.ಎಂ.ಎ.ಎ.ಜಿ.ವೈ) ಯಡಿ ಮುಂದಿನ 5 ವರ್ಷಗಳಲ್ಲಿ (2021-22ನೇ ಸಾಲಿನಿಂದ 2025-26 ರವರೆಗೆ) 2011ರ ಜನಗಣತಿಯ ದತ್ತಾಂಸಗಳ ಆಧಾರದಲ್ಲಿ 500 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ್ದು, ಆ ಪೈಕಿ ಶೇ.50 ರಷ್ಟು ಪರಿಶಿಷ್ಟ ಪಂಗಡದವರನ್ನು ಹೊಂದಿರುವ 36,428 ಗ್ರಾಮಗಳನ್ನು ದೇಶದಲ್ಲಿ ಮಾದರಿ ಗ್ರಾಮವನ್ನಾಗಿ ಮಾಡಲು "ಆದಿ ಆದರ್ಶ ಗ್ರಾಮ" ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ರಾಜ್ಯದಲ್ಲಿನ 24 ಜಿಲ್ಲೆಗಳಲ್ಲಿ 500 ಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿದ್ದು, ಈ ಪೈಕಿ ಶೇ.50 ರಷ್ಟು ಪರಿಶಿಷ್ಟ ಪಂಗಡದವರನ್ನು ಹೊಂದಿರುವ 507 ಗ್ರಾಮಗಳನ್ನು ಗುರುತಿಸಲಾಗಿದೆ. ಈ ಸಂಬಂಧ 2021-22ನೇ ಸಾಲಿನ ಪ್ರಧಾನಮಂತ್ರಿ ಆದಿ ಆದರ್ಶಗ್ರಾಮ ಯೋಜನೆಯಡಿ ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯವು 105 ಗ್ರಾಮಗಳನ್ನು ನಿಗಧಿಪಡಿಸಿದ್ದು, ಪ್ರತಿ ಗ್ರಾಮಕ್ಕೆ ರೂ.20.38 ಲಕ್ಷಗಳನ್ನು ವೆಚ್ಚ ಮಾಡಲಾಗುತ್ತಿದೆ.

## ಋ) ಪ್ರಧಾನ ಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ (PM- JANMAN)

- 2023-24ನೇ ಸಾಲಿನಲ್ಲಿ ಬುಡಕಟ್ಟು ವ್ಯವಹಾರಗಳ ಸಚಿವಾಲಯವು ನೈಜದುರ್ಬಲ ಸಮುದಾಯಗಳ (PVTG) ಅಭಿವೃದ್ಧಿಗಾಗಿ ಪ್ರಧಾನ ಮಂತ್ರಿ ಜನಜಾತಿ ಆದಿವಾಸಿ ನ್ಯಾಯ ಮಹಾ ಅಭಿಯಾನ ಯೋಜನೆಯಡಿ (PM- JANMAN) IEC ಜಾಗೃತಿ ಅಭಿಯಾನವನ್ನು ನಡೆಸುತ್ತಿದ್ದು, PVTG ಸಮುದಾಯಗಳ ಶ್ರೇಯೋಭಿವೃದ್ಧಿಗಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಪ್ರಮುಖ ಒಂಭತ್ತು ಅಭಿವೃದ್ಧಿ ಇಲಾಖೆಗಳನ್ನು (Line Departments) ನೇಮಿಸಿ ಜವಾಬ್ದಾರಿಯನ್ನು ಹಂಚಿಕೆ ಮಾಡಲಾಗಿದ್ದು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

## Multi Purpose Centres (MPC)

- ಮೊದಲ ಹಂತದಲ್ಲಿ ಈ ಯೋಜನೆಯಡಿಯಲ್ಲಿ ರಾಜ್ಯದ Pಗಿಖಿಲು ಜೇನುಕುರುಬ ಮತ್ತು ಕೊರಗ ಸಮುದಾಯಗಳ ಕಾಲೋನಿಗಳಲ್ಲಿ 16 Multipurpose Centres (MPC) ಗಳನ್ನು ಮಂಜೂರು ಮಾಡಿ ನಿರ್ಮಾಣ ಮಾಡಲು ರೂ.960.00 ಲಕ್ಷಗಳನ್ನು ನಿಗಧಿಪಡಿಸಿದ್ದು, ಈ ಪೈಕಿ ಮೊದಲ ಕಂತಿನಲ್ಲಿ ರೂ.332.64 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. (ಕ್ರಿಯಾಯೋಜನೆ ರೂಪಿಸಲಾಗಿದೆ)

## VAN DAN VIKAS KENDRA (VDVK)

- PVTG ಸಮುದಾಯಗಳಾದ ಜೇನುಕುರುಬ ಮತ್ತು ಕೊರಗ ಜನಾಂಗದ ಆರ್ಥಿಕ ಏಳಿಗೆಗಾಗಿ ಮೈಸೂರು ಜಿಲ್ಲೆಗೆ 21 ಮತ್ತು ಕೊಡಗು ಜಿಲ್ಲೆಗೆ 12 ಸೇರಿ ಒಟ್ಟು 33 ವನದನ ವಿಕಾಸ ಕೇಂದ್ರಗಳನ್ನು (VDVK) ಸ್ಥಾಪಿಸಲು ಅನುಮೋದನೆ ನೀಡಿದ್ದು, ಈಗಾಗಲೇ ರೂ.58.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಈ ಪೈಕಿ ಮೊದಲ ಕಂತಾಗಿ ಮೈಸೂರು ಜಿಲ್ಲೆಗೆ ರೂ.29.20 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ.

ಎ) **ಪೌಷ್ಠಿಕ ಆಹಾರ ಯೋಜನೆ:-**

ರಾಜ್ಯದ ದಕ್ಷಿಣಕನ್ನಡ, ಉಡುಪಿ, ಕೊಡಗು, ಮೈಸೂರು, ಉತ್ತರಕನ್ನಡ, ಚಾಮರಾಜನಗರ, ಚಿಕ್ಕಮಗಳೂರು ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ವಾಸಿಸುವ ಮೂಲನಿವಾಸಿ ಪಂಗಡವಾದ ಕೊರಗ ಮತ್ತು ಜೇನುಕುರುಬ ಹಾಗೂ ಇತರೆ ಪರಿಶಿಷ್ಟ ಪಂಗಡದವರಾದ ಕಾಡುಕುರುಬ, ಸೋಲಿಗ, ಯರವ, ಮಲೆಕುಡಿಯ, ಕುಡಿಯ, ಸಿದ್ದಿ, ಗೌಡಲು, ಗೊಂಡ ಹಸಲರು ಮತ್ತು ಬೆಟ್ಟಕುರುಬ ಜನಾಂಗದವರು ಅರಣ್ಯ ಮತ್ತು ಅರಣ್ಯದ ಅಂಚಿನಲ್ಲಿ ವಾಸಿಸುತ್ತಿದ್ದು, ಸದರಿ ಕುಟುಂಬಗಳು ಅಪೌಷ್ಠಿಕತೆಯಿಂದ ಬಳಲುವುದನ್ನು ತಪ್ಪಿಸಲು 12 ತಿಂಗಳಿಗೆ (ಪ್ರತಿ ತಿಂಗಳು) ಪ್ರತಿ ಕುಟುಂಬಕ್ಕೆ 1)ಅಕ್ಕಿ/ರಾಗಿ/ಗೋಧಿ 8 ಕೆ.ಜಿ., 2) ತೊಗರಿಬೇಳೆ 3 ಕೆ.ಜಿ., 3) ಕಡಲೆಬೀಜ (ಶೇಂಗ) 1 ಕೆ.ಜಿ., 4) ಕಡಲೆಕಾಳು 1 ಕೆ.ಜಿ, 5) ಹೆಸರುಕಾಳು/ಹುರಳಿಕಾಳು/ಹಲಸಂದೆ ಕಾಳು 3 ಕೆ.ಜಿ., 6) ಎಣ್ಣೆ 2 ಲೀಟರ್., 7) ಸಕ್ಕರೆ/ಬೆಲ್ಲ 2 ಕೆ.ಜಿ., 8) ಮೊಟ್ಟೆ ತಿಂಗಳಿಗೆ 30 ನ್ನು ಹಾಗೂ 9) 1/2 ಕೆ.ಜಿ ನಂದಿನಿ ತುಪ್ಪ ಕೊಡಲಾಗುವುದು. ಈ ಆಹಾರ ಪದಾರ್ಥಗಳನ್ನು ಪಡಿತರ ಆಹಾರ ಧಾನ್ಯದ ಜೊತೆಗೆ ಹೆಚ್ಚುವರಿಯಾಗಿ ಉಚಿತವಾಗಿ ನೀಡಲಾಗುತ್ತಿದೆ.

**ಏ) ಸ್ಮಶಾನ ಭೂಮಿ ಅಭಿವೃದ್ಧಿ:**

ಪರಿಶಿಷ್ಟ ಪಂಗಡದವರ ಜನಸಂಖ್ಯೆ ಆಧಾರದ ಮೇಲೆ ಪರಿಶಿಷ್ಟ ಪಂಗಡದವರ ಸ್ಮಶಾನ ಭೂಮಿ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಸ್ಮಶಾನ ಭೂಮಿ ಉದ್ದೇಶಕ್ಕಾಗಿ ಹೊಸದಾಗಿ ಜಮೀನು ಖರೀದಿಸಿ ಮೂಲಭೂತ ಸೌಲಭ್ಯ ಒದಗಿಸುವ ಜೊತೆಗೆ ಅಸ್ತಿತ್ವದಲ್ಲಿರುವ/ ಹಾಲಿ ಇರುವ ಸ್ಮಶಾನ ಭೂಮಿಗಳಿಗೆ ಮೂಲಭೂತ ಸೌಕರ್ಯ ಒದಗಿಸಲಾಗುವುದು.

4) **ತರಬೇತಿ ಕಾರ್ಯಕ್ರಮಗಳು.**

ಅ) **ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ:**

ಯು.ಪಿ.ಎಸ್.ಸಿ/ಕೆ.ಪಿ.ಎಸ್.ಸಿ/ ಬ್ಯಾಂಕಿಂಗ್ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಾಮಾನ್ಯ ಪ್ರವೇಶ ಪರೀಕ್ಷೆ ನಡೆಸಿ ಮೆರಿಟ್ ಆಧಾರದಲ್ಲಿ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುತ್ತಿದ್ದು, ತರಬೇತಿ ಸಂಸ್ಥೆಯನ್ನು ಅಭ್ಯರ್ಥಿಗಳೇ ಕೌನ್ಸಲಿಂಗ್ ಮೂಲಕ ಆಯ್ಕೆ ಮಾಡಿಕೊಳ್ಳಬಹುದಾಗಿದೆ. ಅಭ್ಯರ್ಥಿಗಳಿಗೆ ನವದೆಹಲಿ, ಹೈದರಾಬಾದ್ ಹಾಗೂ ಕರ್ನಾಟಕದ ಪ್ರತಿಷ್ಠಿತ ತರಬೇತಿ ಸಂಸ್ಥೆಗಳ ಮೂಲಕ 3 ರಿಂದ 9 ತಿಂಗಳವರೆಗೆ ತರಬೇತಿ ನೀಡಲಾಗುತ್ತಿದೆ.

ಆ) **ಕಾನೂನು ಪದವೀಧರರಿಗೆ ಶಿಷ್ಯವೇತನ:**

ಪರಿಶಿಷ್ಟ ಪಂಗಡದ ಕಾನೂನು ಪದವೀಧರರು ಹಿರಿಯ ವಕೀಲರಿಂದ ಪ್ರಾಯೋಗಿಕ ತರಬೇತಿ ಪಡೆದು ಸ್ವತಂತ್ರವಾಗಿ ವಕೀಲ ವೃತ್ತಿ ನಡೆಸಲು ಅನುಕೂಲವಾಗುವಂತೆ ಶಿಷ್ಯ ವೇತನವನ್ನು ನೀಡಲಾಗುತ್ತದೆ.

5) **ಸಾಮಾಜಿಕ ಸಬಲೀಕರಣ ಕಾರ್ಯಕ್ರಮಗಳು**

ಅ) **ಸರಳ ವಿವಾಹ:**

ಈ ಯೋಜನೆಯನ್ವಯ ಎಲ್ಲಾ ನೊಂದಣಿ ಕಛೇರಿಯಲ್ಲಿ ಸಾಮೂಹಿಕ ವಿವಾಹಗಳ ಆಯೋಜಕರೆಂದು ನೊಂದಣಿಯಾಗಿರುವ ಖಾಸಗಿ ಖಾಸಗಿ ಟ್ರಸ್ಟ್‌ಗಳು, ದೇವಸ್ಥಾನದ ಟ್ರಸ್ಟ್‌ಗಳು, ಸಂಘ-ಸಂಸ್ಥೆಗಳು ಮತ್ತು ಖಾಸಗಿ ವ್ಯಕ್ತಿಗಳು ನಡೆಸುವ ಸಾಮೂಹಿಕ ವಿವಾಹವಾಗುವ ಪರಿಶಿಷ್ಟ ಪಂಗಡದ ದಂಪತಿಗಳಿಗೆ ರೂ.50,000/- ಗಳ ಆರ್ಥಿಕ ನೆರವು ನೀಡಲಾಗುತ್ತದೆ.

**ಆ) ವಿಧವಾ ಮರು ವಿವಾಹ:**

ಪರಿಶಿಷ್ಟ ಪಂಗಡದ ವಿಧವೆಯರು ಹೊಸ ಬದುಕನ್ನು ರೂಪಿಸಲು ಅನುಕೂಲವಾಗುವಂತೆ ಅವರು ಮರು ವಿವಾಹವಾದಲ್ಲಿ ಅಂತಹ ದಂಪತಿಗಳಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುತ್ತದೆ.

**ಇ) ಒಳ ಪಂಗಡ ವಿವಾಹ:**

ಪರಿಶಿಷ್ಟ ಪಂಗಡದ ಯುವಕ/ಯುವತಿಯರು ಪರಿಶಿಷ್ಟ ಪಂಗಡದ ಒಳಗೆ ಅಂತರ್ಜಾತಿ ವಿವಾಹವಾದಲ್ಲಿ ಅಂತಹವರಿಗೆ ರೂ.2.00 ಲಕ್ಷಗಳ ಪ್ರೋತ್ಸಾಹಧನವನ್ನು ನೀಡಲಾಗುತ್ತಿದೆ.

**ಈ) ಮಾಜಿ ದೇವದಾಸಿ ಮಕ್ಕಳ ವಿವಾಹ:**

ಪರಿಶಿಷ್ಟ ಪಂಗಡದ ಮಾಜಿ ದೇವದಾಸಿಯರ ಮಕ್ಕಳು ಇತರೆ ಜಾತಿಯ ಯುವತಿಯನ್ನು ವಿವಾಹವಾದಲ್ಲಿ 3.00 ಲಕ್ಷ ಹಾಗೂ ಮಾಜಿ ದೇವದಾಸಿಯರ ಹೆಣ್ಣು ಮಕ್ಕಳು ಇತರೆ ಜಾತಿಯ ಹುಡುಗನನ್ನು ವಿವಾಹವಾದಲ್ಲಿ ರೂ.5.00 ಲಕ್ಷಗಳ ಪ್ರೋತ್ಸಾಹಧನ ನೀಡಲಾಗುವುದು.

**ಉ) ಅಂತರಜಾತಿ ವಿವಾಹ:**

ಅಸ್ಪೃಶ್ಯತಾ ನಿವಾರಣೆ ಉದ್ದೇಶದಿಂದ ಅಂತರ್‌ಜಾತಿ ವಿವಾಹಿತ ದಂಪತಿಗಳಿಗೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಪರಿಶಿಷ್ಟ ಪಂಗಡದ ಯುವಕರು ಇತರೆ ಪಂಗಡದ ಯುವತಿಯರನ್ನು ವಿವಾಹದಲ್ಲಿ ಅಂತಹ ದಂಪತಿಗಳಿಗೆ ರೂ.2.50 ಲಕ್ಷಗಳ ಪ್ರೋತ್ಸಾಹಧನ

ಪರಿಶಿಷ್ಟ ಪಂಗಡದ ಯುವತಿಯರು ಇತರೆ ಜಾತಿಯ ಯುವಕರನ್ನು ವಿವಾಹದಲ್ಲಿ ಅಂತಹ ದಂಪತಿಗಳಿಗೆ ರೂ.3.00 ಲಕ್ಷಗಳ ಪ್ರೋತ್ಸಾಹಧನ.

*****

ಅನುಬಂಧ-2

## ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

**ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಾ. ಚಂದ್ರಶೇಖರ ಬಸವರಾಜ ಪಾಟೀಲ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:494 (532) ಕ್ಕೆ ಮಾಹಿತಿ**

2023-24ನೇ ಸಾಲಿನಲ್ಲಿ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಹಂಚಿಕೆಯಾದ ಮತ್ತು ಬಿಡುಗಡೆಯಾದ ಅನುದಾನದ ವಿವರ

**ಘೋಷ್ವಾರೆ**

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾರ್ಯಕ್ರಮಗಳ ವಿವರ | ಹಂಚಿಕೆ | ಬಿಡುಗಡೆ | ಖರ್ಚು |
|---|---|---|---|---|
| 1 | ರಾಜ್ಯವಲಯ | 111040.80 | 104293.02 | 104092.28 |
| 2 | ಜಿಲ್ಲಾ ವಲಯ | 66995.78 | 66638.69 | 66373.56 |
| 3 | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ | 17500.00 | 17500.00 | 17500.00 |
| | ಒಟ್ಟು | 195536.58 | 188431.71 | 187965.84 |

## 2023-24ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಹಂಚಿಕೆಯಾದ ಮತ್ತು ಬಿಡುಗಡೆಯಾದ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಹಂಚಿಕೆ | ಬಿಡುಗಡೆ | ಖರ್ಚು |
|---|---|---|---|---|
| | ರಾಜ್ಯವಲಯ ಯೋಜನೆ (31ನೇ ಮಾರ್ಚ್-2024 ರ ಅಂತ್ಯಕ್ಕೆ) | | | |
| 1 | ನಿರ್ದೇಶನ ಮತ್ತು ಆಡಳಿತ 2225-02-001-0-01 | 597.58 | 597.58 | 499.69 |
| 2 | ಸಂಶೋಧನೆ ಮತ್ತು ತರಬೇತಿ (ಟಿಆರ್‌ಐ) 2225-02-001-0-02 | 412.79 | 387.66 | 290.78 |
| 3 | ಅನುಸೂಚಿತ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೇ ಇರುವ ಮೊತ್ತ 2225-02-001-0-03 | 2099.01 | 2099.00 | 2099.00 |
| 4 | ವಿಶೇಷ ದುರ್ಬಲ ಬುಡಕಟ್ಟು ಜನಾಂಗಗಳ ಅಭಿವೃದ್ಧಿ 2225-02-794-0-01 | 1500.00 | 0.00 | 0.00 |
| 5 | ಭಾರತ ಸಂವಿಧಾನ ಅನುಚ್ಛೇದ 275(1)ರಡಿಯ ಕಾರ್ಯಯೋಜನೆ 2225-02-794-0-03 | 5000.00 | 4070.00 | 4070.00 |
| 6 | ಗಿರಿಜನ ಉಪಯೋಜನೆಗೆ ಕೇಂದ್ರದ ವಿಶೇಷ ನೆರವು 2225-02-794-0-04 | 2500.00 | 0.00 | 0.00 |
| 7 | ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಗುಣಮಟ್ಟದ ಉನ್ನತೀಕರಣ 2225-02-277-0-36 | 2000.00 | 2000.00 | 1999.35 |
| 8 | ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆಗಳ ನಿರ್ವಹಣೆ 2225-02-277-0-37 | 29762.67 | 29762.67 | 29761.94 |
| 9 | ಪರಿಶಿಷ್ಟ ಪಂಗಡದ ವಿವಿದ ಅಭಿವೃದ್ಧಿ ಕಾರ್ಯಕ್ರಮಗಳು 2225-02-794-0-05 | 29625.00 | 29625.00 | 29621.74 |
| 10 | ನಿವಾಸಿ ಶಾಲೆಗಳ ನಿರ್ಮಾಣ 4225-02-277-2-03 | 22000.00 | 22000.00 | 21999.26 |
| 11 | ಆಶ್ರಮಶಾಲೆ ಹಾಗೂ ಹಾಸ್ಟೆಲ್‌ಗಳ ನಿರ್ಮಾಣ 4225-02-277-2-02 | 300.00 | 300.00 | 300.00 |
| 12 | ಪರಿಶಿಷ್ಟ ಪಂಗಡದ ವಿವಿದ ಅಭಿವೃದ್ಧಿ ಕಾರ್ಯಕ್ರಮಗಳು 4225-02-794-0-01 | 13000.00 | 13000.00 | 13000.00 |
| 13 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ-2013ರಡಿ ಬಳಕೆಯಾಗದೇ ಇರುವ ಮೊತ್ತ 4225-02-190-0-02 | 87.47 | 87.47 | 86.88 |
| 14 | ಖಾಲಿ ಹುದ್ದೆಗಳಾಗಿ ಅನುದಾನ 2225-02-001-0-50 | 1792.64 | 0.00 | 0.00 |
| 15 | ಆಡಳಿತಾತ್ಮಕ ವೆಚ್ಚ (ಕೇ.ಪು.ಯೋ) 2225-02-001-0-05 | 31.00 | 31.00 | 31.00 |
| 16 | ಪಿ.ಎಂ ಜನ್‌ಮನ್ (ಕೇ.ಪು.ಯೋ) 4225-02-102-0-01 | 332.64 | 332.64 | 332.64 |
| | ಒಟ್ಟು (ಎ) | 111040.80 | 104293.02 | 104092.28 |

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಹಂಚಿಕೆ | ಬಿಡುಗಡೆ | ಖರ್ಚು |
|---|---|---|---|---|
| | ಜಿಲ್ಲಾವಲಯ ಯೋಜನೆ (31ನೇ ಮಾರ್ಚ್-2024 ರ ಅಂತ್ಯಕ್ಕೆ) | | | |
| 1 | ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-102-0-33 | 5162.06 | 5162.06 | 5162.06 |
| 2 | ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿವೇತನ ಮತ್ತು ಧನಸಹಾಯ 2225-00-102-0-38 | 13460.30 | 13460.30 | 13460.30 |
| 3 | ಮೆಟ್ರಿಕ ನಂತರದ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ವಹಣೆ 2225-00-102-0-43 | 475.00 | 387.31 | 341.76 |
| 4 | ಕಾರ್ಯಕಾರಿ ಸಿಬ್ಬಂದಿ - ಜಿಲ್ಲಾ ಗಿರಿಜನ ಕಲ್ಯಾಣ ಕಛೇರಿ 2225-00-102-0-46 | 1669.47 | 1669.47 | 1669.47 |
| 5 | ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ 2225-00-102-0-68 | 3000.00 | 2798.78 | 2681.58 |
| 6 | ಮೆಟ್ರಿಕ ನಂತರದ ವಿದ್ಯಾರ್ಥಿಗಳಿಗೆ ಹೆಚ್ಚಿನ ಊಟ ಮತ್ತು ವಸತಿ ವೆಚ್ಚ 2225-00-102-0-71 | 3430.28 | 3430.28 | 3430.28 |
| 7 | ಮೆಟ್ರಿಕ್ ಪೂರ್ವ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ವಹಣೆ 2225-00-102-0-77 | 140.00 | 93.00 | 81.58 |
| 8 | ಪರಿಶಿಷ್ಟ ವರ್ಗದವರಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ (ಕೇ.ಪು.ಯೋ-ಕೇಂದ್ರದ ಪಾಲು) 2225-00-102-0-07 | 22556.05 | 22556.05 | 22556.05 |
| 9 | ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ 2225-00-102-0-69 | 90.30 | 71.10 | 71.10 |
| 10 | ಆಶ್ರಮ ಶಾಲೆಗಳ ನಿರ್ವಹಣೆ 2225-00-102-0-35 | 4149.27 | 4149.27 | 4149.27 |
| 11 | ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಾನುದಾನ 2225-00-102-0-48 | 160.00 | 158.02 | 67.06 |
| 12 | ಗಿರಿಜನ ಪ್ರದೇಶ ಉಪಯೋಜನೆಗಳು 2225-00-102-0-45 | 561.47 | 561.47 | 561.47 |
| 13 | ಪರಿಶಿಷ್ಟ ವರ್ಗದವರಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ (ಕೇ.ಪು.ಯೋ) (9&10ನೇ ತರಗತಿಗಳಿಗೆ) 2225-00-102-0-09 | 3489.57 | 3489.57 | 3489.57 |
| 14 | ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ (ಕೇ.ಪು.ಯೋ-ರಾಜ್ಯದ ಪಾಲು) 2225-00-102-0-10 | 7518.68 | 7518.68 | 7518.68 |
| 15 | ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ (ಕೇ.ಪು.ಯೋ-ರಾಜ್ಯದ ಪಾಲು) 2225-00-102-0-11 | 1133.33 | 1133.33 | 1133.33 |
| | ಒಟ್ಟು | 66995.78 | 66638.69 | 66373.56 |

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಹಂಚಿಕೆ | ಬಿಡುಗಡೆ | ಖರ್ಚು |
|---|---|---|---|---|
| ಪರಿಶಿಷ್ಟ ಪಂಗಡದ ಅಭಿವೃದ್ಧಿ ನಿಗಮ ರಾಜ್ಯವಲಯ ಯೋಜನೆ (31ನೇ ಮಾರ್ಚ್-2024 ರ ಅಂತ್ಯಕ್ಕೆ) | | | | |
| 1 | ಸ್ವಯಂ ಉದ್ಯೋಗ ಯೋಜನೆ 2225-02-190-2-01 | 6000.00 | 6000.00 | 6000.00 |
| 2 | ಮೈಕ್ರೋ ಕ್ರೆಡಿಟ್(ಕಿರುಸಾಲ) (ಸಹಾಯಧನ) 2225-02-190-2-07 | 5000.00 | 5000.00 | 5000.00 |
| 3 | ಗಂಗಾ ಕಲ್ಯಾಣ ಯೋಜನೆ 2225-02-102-0-04 | 6500.00 | 6500.00 | 6500.00 |
| | ಒಟ್ಟು | 17500.00 | 17500.00 | 17500.00 |

## ಅನುಬಂಧ-2

## ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ

**ವಿಧಾನ ಪರಿಷತ್ ಸದಸ್ಯರಾದ ಶ್ರೀ ಡಾ. ಚಂದ್ರಶೇಖರ ಬಸವರಾಜ ಪಾಟೀಲ್ ರವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:494 (532) ಕ್ಕೆ ಮಾಹಿತಿ**

2024-25ನೇ ಸಾಲಿನಲ್ಲಿ ಇಲಾಖಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಹಂಚಿಕೆಯಾದ ಮತ್ತು ಬಿಡುಗಡೆಯಾದ ಅನುದಾನದ ವಿವರ

**ಘೋಷ್ವಾರೆ**

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಕಾರ್ಯಕ್ರಮಗಳ ವಿವರ | ಹಂಚಿಕೆ (LE) | ಬಿಡುಗಡೆ | ಖರ್ಚು |
|---|---|---|---|---|
| 1 | ರಾಜ್ಯವಲಯ | 114116.50 | 101240.03 | 101074.72 |
| 2 | ಜಿಲ್ಲಾ ವಲಯ | 54904.18 | 50366.05 | 49011.67 |
| 3 | ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ | 17500.00 | 17500.00 | 17500.00 |
| | ಒಟ್ಟು | **186520.68** | **169106.08** | **167586.39** |

## 2024-25ನೇ ಸಾಲಿನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಕಾರ್ಯಕ್ರಮಗಳಿಗೆ ಹಂಚಿಕೆಯಾದ ಅನುದಾನದ ವಿವರ

(ರೂ.ಲಕ್ಷಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಹಂಚಿಕೆ | ಬಿಡುಗಡೆ | ವೆಚ್ಚ |
|---|---|---|---|---|
| | **ರಾಜ್ಯವಲಯ ಯೋಜನೆ** | | | |
| 1 | ನಿರ್ದೇಶನ ಮತ್ತು ಆಡಳಿತ 2225-02-001-0-01 | 693.34 | 641.08 | 572.52 |
| 2 | ಸಂಶೋಧನೆ ಮತ್ತು ತರಬೇತಿ (ಟಿಆರ್‌ಐ) 2225-02-001-0-02 | 548.61 | 548.61 | 525.97 |
| 3 | ಅನುಸೂಚಿತ ಜಾತಿ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ 2013 ರಡಿ ಬಳಕೆಯಾಗದೇ ಇರುವ ಮೊತ್ತ 2225-02-001-0-03 | 1381.06 | 1381.06 | 1379.55 |
| 4 | ವಿಶೇಷ ದುರ್ಬಲ ಬುಡಕಟ್ಟು ಜನಾಂಗಗಳ ಅಭಿವೃದ್ಧಿ 2225-02-794-0-01 | 2500.00 | 0.00 | 0.00 |
| 5 | ಭಾರತ ಸಂವಿಧಾನ ಅನುಚ್ಛೇದ 275(1)ರಡಿಯ ಕಾರ್ಯಯೋಜನೆ 2225-02-794-0-03 | 10000.00 | 4730.26 | 4727.26 |
| 6 | ಗಿರಿಜನ ಉಪಯೋಜನೆಗೆ ಕೇಂದ್ರದ ವಿಶೇಷ ನೆರವು 2225-02-794-0-04 | 2500.00 | 0.00 | 0.00 |
| 7 | ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳ ಗುಣಮಟ್ಟದ ಉನ್ನತೀಕರಣ 2225-02-277-0-36 | 1500.00 | 1500.00 | 1492.47 |
| 8 | ಮೊರಾರ್ಜಿ ದೇಸಾಯಿ ವಸತಿ ಶಾಲೆ ಮತ್ತು ಕಿತ್ತೂರುರಾಣಿ ಚೆನ್ನಮ್ಮ ವಸತಿ ಶಾಲೆಗಳ ನಿರ್ವಹಣೆ 2225-02-277-0-37 | 29725.90 | 29725.90 | 29725.90 |
| 9 | ಪರಿಶಿಷ್ಟ ಪಂಗಡದ ವಿವಿದ ಅಭಿವೃದ್ಧಿ ಕಾರ್ಯಕ್ರಮಗಳು 2225-02-794-0-05 | 27125.00 | 27125.00 | 27086.71 |
| 10 | ನಿವಾಸಿ ಶಾಲೆಗಳ ನಿರ್ಮಾಣ 4225-02-277-2-03 | 11000.00 | 11000.00 | 11000.00 |
| 11 | ಆಶ್ರಮಶಾಲೆ ಹಾಗೂ ಹಾಸ್ಟೆಲ್‌ಗಳ ನಿರ್ಮಾಣ 4225-02-277-2-02 | 6176.00 | 6176.00 | 6176.00 |
| 12 | ಪರಿಶಿಷ್ಟ ಪಂಗಡದ ವಿವಿದ ಅಭಿವೃದ್ಧಿ ಕಾರ್ಯಕ್ರಮಗಳು 4225-02-794-0-01 | 17000.00 | 17000.00 | 16976.43 |
| 13 | ಅನುಸೂಚಿತ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಕಾಯ್ದೆ-2013ರಡಿ ಬಳಕೆಯಾಗದೇ ಇರುವ ಮೊತ್ತ 4225-02-190-0-02 | 320.21 | 320.21 | 320.00 |
| 14 | ಖಾಲಿ ಹುದ್ದೆಗಳಾಗಿ ಅನುದಾನ 2225-02-001-0-50 | 2554.47 | 0.00 | 0.00 |
| 15 | ಆಡಳಿತಾತ್ಮಕ ವೆಚ್ಚ (ಕೇ.ಪು.ಯೋ) 2225-02-001-0-05 | 65.50 | 65.50 | 65.50 |
| 16 | ಕೇಂದ್ರ- ಪಿ.ಎಂ-ಜನ್ ಮನ್ (ಬಹು ಉದ್ದೇಶದ ಕೇಂದ್ರಗಳ ನಿರ್ಮಾಣ) ಕೇ.ಪು.ಯೋ-100% 4225-02-102-0-01 | 1026.41 | 1026.41 | 1026.41 |
| | ಒಟ್ಟು (ಎ) | **114116.50** | **101240.03** | **101074.72** |

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಹಂಚಿಕೆ | ಬಿಡುಗಡೆ | ವೆಚ್ಚ |
|---|---|---|---|---|
| | ಜಿಲ್ಲಾವಲಯ ಯೋಜನೆ (31ನೇ ಮಾರ್ಚ್-2025 ರ ಅಂತ್ಯಕ್ಕೆ) | | | |
| 1 | ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳ ವಿದ್ಯಾರ್ಥಿ ನಿಲಯಗಳ ನಿರ್ವಹಣೆ 2225-00-102-0-33 | 5338.23 | 5226.76 | 4952.04 |
| 2 | ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿವೇತನ ಮತ್ತು ಧನಸಹಾಯ 2225-00-102-0-38 | 13454.32 | 13098.87 | 12867.57 |
| 3 | ಮೆಟ್ರಿಕ ನಂತರದ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ವಹಣೆ 2225-00-102-0-43 | 494.00 | 494.00 | 484.44 |
| 4 | ಕಾರ್ಯಕಾರಿ ಸಿಬ್ಬಂದಿ - ಜಿಲ್ಲಾ ಗಿರಿಜನ ಕಲ್ಯಾಣ ಕಛೇರಿ 2225-00-102-0-46 | 1890.46 | 1890.46 | 1779.01 |
| 5 | ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ 2225-00-102-0-68 | 3000.00 | 3000.00 | 2866.29 |
| 6 | ಮೆಟ್ರಿಕ ನಂತರದ ವಿದ್ಯಾರ್ಥಿಗಳಿಗೆ ಹೆಚ್ಚಿನ ಊಟ ಮತ್ತು ವಸತಿ ವೆಚ್ಚ 2225-00-102-0-71 | 3953.78 | 3665.39 | 3400.07 |
| 7 | ಮೆಟ್ರಿಕ್ ಪೂರ್ವ ಸರ್ಕಾರಿ ವಿದ್ಯಾರ್ಥಿ ನಿಲಯಗಳ ಕಟ್ಟಡ ನಿರ್ವಹಣೆ 2225-00-102-0-77 | 145.60 | 145.60 | 144.52 |
| 8 | ಪರಿಶಿಷ್ಟ ವರ್ಗದವರಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ (ಕೇ.ಪು.ಯೋ-ಕೇಂದ್ರದ ಪಾಲು) 2225-00-102-0-07 | 12500.00 | 12500.00 | 12500.00 |
| 9 | ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯಗಳ ಅಭಿವೃದ್ಧಿ 2225-00-102-0-69 | 89.58 | 89.58 | 72.47 |
| 10 | ಆಶ್ರಮ ಶಾಲೆಗಳ ನಿರ್ವಹಣೆ 2225-00-102-0-35 | 6715.55 | 4399.39 | 4245.59 |
| 11 | ಖಾಸಗಿ ವಿದ್ಯಾರ್ಥಿನಿಲಯಗಳಿಗೆ ಸಹಾಯಾನುದಾನ 2225-00-102-0-48 | 188.33 | 188.33 | 56.90 |
| 12 | ಗಿರಿಜನ ಪ್ರದೇಶ ಉಪಯೋಜನೆಗಳು 2225-00-102-0-45 | 567.66 | 567.66 | 542.76 |
| 13 | ಪರಿಶಿಷ್ಟ ವರ್ಗದವರಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿವೇತನ (ಕೇ.ಪು.ಯೋ) (9&10ನೇ ತರಗತಿಗಳಿಗೆ) 2225-00-102-0-09 | 2000.00 | 700.00 | 700.00 |
| 14 | ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ನಂತರದ ವಿದ್ಯಾರ್ಥಿ ವೇತನ (ಕೇ.ಪು.ಯೋ-ರಾಜ್ಯದ ಪಾಲು) 2225-00-102-0-10 | 4166.67 | 4166.67 | 4166.67 |
| 15 | ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನ (ಕೇ.ಪು.ಯೋ-ರಾಜ್ಯದ ಪಾಲು) 2225-00-102-0-11 | 400.00 | 233.34 | 233.34 |
| | **ಒಟ್ಟು (ಬಿ)** | **54904.18** | **50366.05** | **49011.67** |

| ಕ್ರ.ಸಂ | ಕಾರ್ಯಕ್ರಮಗಳ ವಿವರ | ಹಂಚಿಕೆ | ಬಿಡುಗಡೆ | ವೆಚ್ಚ |
|---|---|---|---|---|
| ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ರಾಜ್ಯವಲಯ ಯೋಜನೆ (31ನೇ ಮಾರ್ಚ್-2025 ರ ಅಂತ್ಯಕ್ಕೆ) | | | | |
| 1 | ಸ್ವಯಂ ಉದ್ಯೋಗ ಯೋಜನೆ<br>2225-02-190-2-01 | 6000.00 | 6000.00 | 6000.00 |
| 2 | ಮೈಕ್ರೋ ಕ್ರೆಡಿಟ್(ಕಿರುಸಾಲ) (ಸಹಾಯಧನ)<br>2225-02-190-2-07 | 5000.00 | 5000.00 | 5000.00 |
| 3 | ಗಂಗಾ ಕಲ್ಯಾಣ ಯೋಜನೆ<br>2225-02-102-0-04 | 6500.00 | 6500.00 | 6500.00 |
| | ಒಟ್ಟು (ಸಿ) | 17500.00 | 17500.00 | 17500.00 |

ಅನುಬಂಧ - 3

# ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು 2022-23 ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳು.

**1. ಸ್ವಯಂ ಉದ್ಯೋಗ ಕಾರ್ಯಕ್ರಮಗಳು:-**

**ಅ) ಸ್ವಯಂಉದ್ಯೋಗ ನೇರಸಾಲ ಯೋಜನೆ:**

ಸ್ವಯಂಉದ್ಯೋಗ ನೇರಸಾಲ ಯೋಜನೆಯನ್ನು ಪರಿಶಿಷ್ಟ ಪಂಗಡದ ಫಲಾಪೇಕ್ಷಿಗಳಿಗೆ ತರಕಾರಿ, ಹಣ್ಣು-ಹಂಪಲು, ಮೀನು, ಮಾಂಸ ಮಾರಾಟ/ ಕುರಿ / ಹಂದಿ/ ಮೊಲ ಸಾಕಾಣಿಕೆಇತ್ಯಾದಿ ಆರ್ಥಿಕ ಚಟುವಟಿಕೆಗಳಿಗೆ ಮತ್ತು ಮಳಿಗೆ / ಸಣ್ಣಪ್ರಮಾಣದ ವ್ಯಾಪಾರ ಇತ್ಯಾದಿಗಳಿಗೆ ದುಡಿಮೆ ಬಂಡವಾಳ ಸೇರಿದಂತೆ ರೂ.1,00,000/-ಗಳಿಗೆ ಆರ್ಥಿಕ ಸೌಲಭ್ಯಕಲ್ಪಿಸಲಾಗುವುದು. ಘಟಕ ವೆಚ್ಚದಲ್ಲಿ ರೂ.50,000/- ಸಹಾಯಧನ ರೂ.50,000/- ಸಾಲವಾಗಿರುತ್ತದೆ. ಸಾಲವನ್ನು ನಿಗಮದಿಂದಲೇ ಭರಿಸಲಾಗುವುದು.

**ಆ) ಉದ್ಯಮಶೀಲತಾ ಅಭಿವೃದ್ಧಿ ಯೋಜನೆ:-**

ಈ ಯೋಜನೆಯಡಿ ಪರಿಶಿಷ್ಟ ಪಂಗಡದಯುವಕ/ಯುವತಿಯರು ಸಣ್ಣ ವ್ಯಾಪಾರ ಸಣ್ಣಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಸ್ವಯಂಉದ್ಯೋಗ ಘಟಕಗಳನ್ನು ಪ್ರಾರಂಭಿಸಲು ನಿಗಮದಿಂದ ಸಹಾಯಧನ ಹಾಗೂ ಬ್ಯಾಂಕಿನ ಸಾಲ ವ್ಯವಸ್ಥೆಯೊಂದಿಗೆ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತದೆ. ಘಟಕ ವೆಚ್ಚದಲ್ಲಿ ಶೇ.70 ರಷ್ಟು ಅಥವಾ ಗರಿಷ್ಟ ರೂ.2.00 ಲಕ್ಷಗಳು ಸಹಾಯಧನವಾಗಿದ್ದು, ಉಳಿದ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ.ಸರಕು ಸಾಗಾಣಿಕೆ ವಾಹನ ಖರೀದಿ ಉದ್ದೇಶಕ್ಕೆ ಘಟಕ ವೆಚ್ಚದಲ್ಲಿ ಶೇ.70 ರಷ್ಟು ಅಥವಾ ಗರಿಷ್ಟ ರೂ.3.50 ಲಕ್ಷಗಳ ಸಹಾಯಧನವಾಗಿದ್ದು, ಉಳಿದ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ.

**ಇ) ಡಾ. ಬಾಬು ಜಗಜೀವನರಾಂ ದ್ವಿಚಕ್ರ ವಾಹನ ಸರಕು ಸಾಗಾಣಿಕೆ ಯೋಜನೆ:-**

ಈ ಯೋಜನೆಯಡಿ ಪರಿಶಿಷ್ಟ ಪಂಗಡದಯುವಕ/ಯುವತಿಯರಲ್ಲಿ ಸ್ವ-ಉದ್ಯೋಗವನ್ನು ಉತ್ತೇಜಿಸಲು ವಿದ್ಯುತ್‌ಚಾಲಿತ ಅಥವಾ ಇತರೆ ದ್ವಿಚಕ್ರ ವಾಹನ ಖರೀದಿಗೆ ಸಹಾಯಧನ ರೂ.50,000/- ಗಳಾಗಿದ್ದು, ಮತ್ತು ಸಾಲ ರೂ.20,000/- ಉಳಿದ ಮೊತ್ತ ಫಲಾನುಭವಿಯ ವೈಯುಕ್ತಿಕ ವಂತಿಕೆ, ಬ್ಯಾಂಕ್/ಹಣಕಾಸು ಸಂಸ್ಥೆಗಳ ಮೂಲಕ ಸಾಲವಾಗಿರುತ್ತದೆ.

**2. ಪ್ರೇರಣಾ (ಮೈಕ್ರೋಕ್ರೆಡಿಟ್) ಯೋಜನೆ:-**

- ನಿಗಮವು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರು ರಚಿಸಿಕೊಂಡಿರುವ ನೋಂದಾಯಿತ ಸ್ವಸಹಾಯ ಸಂಘದ ಸದಸ್ಯರುಗಳ ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣ ಉದ್ದೇಶಕ್ಕಾಗಿ ಪ್ರೇರಣಾಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.
- ಗರಿಷ್ಟ 10 ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರನ್ನು ಹೊಂದಿರುವ ನೋಂದಾಯಿತ ಸ್ವಸಹಾಯ ಸಂಘಕ್ಕೆ ಪ್ರತಿ ಸದಸ್ಯರಿಗೆ ರೂ.15000/- ಸಹಾಯಧನ ಮತ್ತು ರೂ.10,000/- ಸಾಲ, ಒಟ್ಟು ರೂ.25,000/- ಗಳಂತೆ ಒಂದು ಸಂಘಕ್ಕೆ ಗರಿಷ್ಟ ರೂ:2.50ಲಕ್ಷ ಅನುದಾನವನ್ನು ಒದಗಿಸಲಾಗುವುದು.
- ಸಾಲವನ್ನು ನಿಗಮದಿಂದಲೇ ನೀಡಲಾಗುತ್ತಿದ್ದು, ಇದಕ್ಕೆ ವಾರ್ಷಿಕ ಶೇ.4 ರದರದಲ್ಲಿ ಬಡ್ಡಿ ವಿಧಿಸಲಾಗುತ್ತಿದ್ದು, 3 ವರ್ಷಗಳ ಅವಧಿಯಲ್ಲಿ ಮಾಸಿಕ / ತ್ರೈಮಾಸಿಕ ಕಂತುಗಳಲ್ಲಿ ಸಾಲವನ್ನು ನಿಗಮಕ್ಕೆ ಮರುಪಾವತಿ ಮಾಡಬೇಕಾಗಿರುತ್ತದೆ.

3. **ಸಮಗ್ರ ಗಂಗಾ ಕಲ್ಯಾಣ ಯೋಜನೆ (ವೈಯಕ್ತಿಕ ಕೊಳವೆಬಾವಿ):-**

- ಪರಿಶಿಷ್ಟ ಪಂಗಡಕ್ಕೆ ಸೇರಿದ ಸಣ್ಣ ಮತ್ತು ಅತಿ ಸಣ್ಣರೈತರು ಹೊಂದಿರುವ 1-20 ಯಿಂದ 5-00 ಎಕರೆ ಖುಷ್ಕಿ ಜಮೀನಿನಲ್ಲಿ ಕೊಳವೆಬಾವಿ ಕೊರೆದು, ಪಂಪಸೆಟ್ ಸರಬರಾಜು ಮಾಡಿ, ಅಳವಡಿಸಿ ವಿದ್ಯುದ್ದೀಕರಣಗೊಳಿಸಿ, ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ.

- ಈ ಯೋಜನೆಯಡಿಅಂತರ್ಜಲ ಮಟ್ಟ ಕುಸಿದಿರುವ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ. 4.50 ಲಕ್ಷವಿದ್ದು, ಇದರಲ್ಲಿ ರೂ.4.00 ಲಕ್ಷ ಸಹಾಯಧನ, ರೂ.50,000/- ಅವಧಿಸಾಲವಾಗಿರುತ್ತದೆ.

- ಇತರೆ 24 ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ.3.50 ಲಕ್ಷ ವಿದ್ದು, ಇದರಲ್ಲಿ ರೂ.3.00 ಲಕ್ಷ ಸಹಾಯಧನ ರೂ.50,000/- ಅವಧಿ ಸಾಲವಾಗಿರುತ್ತದೆ. ಸಹಾಯಧನದಲ್ಲಿ ರೂ.50,000/- ವಿದ್ಯುದ್ದೀಕರಣ ವೆಚ್ಚವಾಗಿ ಎಸ್ಕಾಂಗಳಿಗೆ ಬಿಡುಗಡೆ ಮಾಡಲಾಗುವುದು.

**ಗಂಗಾ ಕಲ್ಯಾಣ- ಏತ ನೀರಾವರಿಯೋಜನೆ:-** ಗಂಗಾ ಕಲ್ಯಾಣಏತ ನೀರಾವರಿ ಯೋಜನೆಯಡಿ ನೈಸರ್ಗಿಕವಾಗ ನದಿ, ತೊರೆ, ನಾಲೆಗಳ ಅಕ್ಕಪಕ್ಕದಲ್ಲಿರುವ ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತಿ ಸಣ್ಣ ರೈತರುಗಳು ಹೊಂದಿರುವ ಜಮೀನುಗಳಿಗೆ ಪೈಪ್ ಲೈನ್ ಅಳವಡಿಸಿ, ಪಂಪ್‌ಸೆಟ್ ಸರಬರಾಜು ಮಾಡಿ ಅಳವಡಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಿ ಉಚಿತವಾಗಿ ನೀರಾವರಿ ಸೌಲಭ್ಯವನ್ನುಒದಗಿಸಲಾಗುವುದು. ಈ ಯೋಜನೆಯಡಿ ಕನಿಷ್ಟ 3 ಫಲಾನುಭವಿಗಳು ಹೊಂದಿರುವ 8-00 ಎಕರೆ ಖುಷ್ಕಿ ಜಮೀನಿಗೆ ರೂ.4.00 ಲಕ್ಷಘಟಕ ವೆಚ್ಚದಲ್ಲಿ ಸೌಲಭ್ಯ ಕಲ್ಪಿಸಲಾಗುವುದು.3 ಕ್ಕಿಂತ ಹೆಚ್ಚು ಫಲಾನುಭವಿಗಳು ಹೊಂದಿರುವ 15-00 ಎಕರೆ ಜಮೀನಿನ ಘಟಕಕ್ಕೆ ರೂ.6.00 ಲಕ್ಷಘಟಕ ವೆಚ್ಚದಲ್ಲಿ ಸೌಲಭ್ಯಕಲ್ಪಿಸಲಾಗುವುದು.

**ಸಮಗ್ರ ಗಂಗಾ ಕಲ್ಯಾಣ (ತೆರೆದಬಾವಿ)ಯೋಜನೆ:-**ಮಲೆನಾಡು ಪ್ರದೇಶಗಳಾದ ಕೊಡಗು, ಶಿವಮೊಗ್ಗ,ಚಿಕ್ಕಮಗಳೂರು, ದಕ್ಷಿಣಕನ್ನಡ, ಉಡುಪಿ ಮತ್ತು ಉತ್ತರಕನ್ನಡ ಜಿಲ್ಲೆಗಳಲ್ಲಿ ಎಲ್ಲಿ ಕೊಳವೆಬಾವಿ ಸೌಲಭ್ಯಕಲ್ಪಿಸಲು ಸಾಧ್ಯವಾಗುವುದಿಲ್ಲವೋ ಅಂತಹ ಫಲಾಪೇಕ್ಷಿಗಳ ಜಮೀನುಗಳಲ್ಲಿ ತೆರೆದಬಾವಿ ತೋಡಿ, ಡೀಸಲ್/ಮೋನೋ ಬ್ಲಾಕ್ ಪಂಪ್‌ಸೆಟ್ ಸರಬರಾಜು ಮಾಡಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲಾಗುವುದು.ಘಟಕ ವೆಚ್ಚ ರೂ.1.50ಲಕ್ಷವಿದ್ದು, ಇದರಲ್ಲಿ ರೂ.1.00 ಲಕ್ಷ ತೆರೆದಬಾವಿ ತೊಡಲು ಮತ್ತು ರೂ.50,000/- ಪಂಪ್‌ಸೆಟ್ ಸರಬರಾಜು ಮಾಡಿ, ವಿದ್ಯುತ್ ಸಂಪರ್ಕಗೊಳಿಸಲು ವಿನಿಯೋಗಿಸಲಾಗುವುದು.

4. **ಭೂ ಒಡೆತನ ಯೋಜನೆ:-**

- ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಭೂರಹಿತ ಮಹಿಳಾಕೃಷಿ ಕಾರ್ಮಿಕರನ್ನು ಭೂಒಡೆಯರನ್ನಾಗಿ ಮಾಡುವ ಉದ್ದೇಶ ಹೊಂದಲಾಗಿರುತ್ತದೆ. ಖರೀದಿಸುವ ಜಮೀನು ಫಲಾಪೇಕ್ಷಿಯ ವಾಸಿಸುವ ಸ್ಥಳದಿಂದ 10ಕಿಮೀ ವ್ಯಾಪ್ತಿಯಲ್ಲಿರಬೇಕು.

- ಯೋಜನೆಯಡಿ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿಯನ್ನು ನೀಡುವ ಅಧಿಕಾರವನ್ನು ಆಯಾ ಜಿಲ್ಲೆಯಲ್ಲಿನ ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುತ್ತದೆ.

- ಬೆಂಗಳೂರು ನಗರ ಮತ್ತು ಗ್ರಾಮಾಂತರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಈ ಯೋಜನೆಯಡಿ ಘಟಕ ವೆಚ್ಚವನ್ನು ರೂ.25.00 ಲಕ್ಷಗಳು ಮತ್ತು ಉಳಿದ 26 ಜಿಲ್ಲೆಗಳಲ್ಲಿ ಘಟಕ ವೆಚ್ಚವನ್ನು ರೂ.20.00 ಲಕ್ಷಗಳಿಗೆ ನಿಗದಿಪಡಿಸಲಾಗಿರುತ್ತದೆ.

- ಒಟ್ಟು ಘಟಕ ವೆಚ್ಚದಲ್ಲಿ ಶೇ.50 ರಷ್ಟು ಸಹಾಯಧನ ಮತ್ತು ಶೇ.50 ರಷ್ಟು ಅವಧಿ ಸಾಲವಾಗಿರುತ್ತದೆ. ಅವಧಿಸಾಲವನ್ನು ನಿಗಮದಿಂದಲೇ ಭರಿಸಲಾಗುತ್ತದೆ. ಇದಕ್ಕೆ ವಾರ್ಷಿಕ ಶೇ.6ರ ದರದಲ್ಲಿ ಬಡ್ಡಿ ವಿಧಿಸಲಾಗುತ್ತದೆ. ಸಾಲ ಮತ್ತು ಬಡ್ಡಿಯನ್ನು 10 ವರ್ಷಗಳ ಅವಧಿಯಲ್ಲಿ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.

- ಜಮೀನು ಮಾರಾಟ ಮಾಡುವ ಭೂ ಮಾಲೀಕರು ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬಾರದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಸಮಿತಿಯುಜಮೀನಿನ ದರವನ್ನು ನಿಗದಿಪಡಿಸುತ್ತದೆ.

5. ತರಬೇತಿಕಾರ್ಯಕ್ರಮ:-

- ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ/ಯುವತಿಯರಿಗೆ ಸ್ವಾವಲಂಬಿಗಳನ್ನಾಗಿಸಲು ವಿವಿಧ ತರಬೇತಿ ಕಾರ್ಯಕ್ರಮವನ್ನು ಕರ್ನಾಟಕಕೌಶಲ್ಯಅಭಿವೃದ್ಧಿ ಪ್ರಾಧಿಕಾರಇವರ ಸಹಯೋಗದೊಂದಿಗೆ ಅನುಷ್ಠಾನಗೊಳಿಸಲಾಗುವುದು.

- ಪರಿಶಿಷ್ಟ ಪಂಗಡದ ಮಹಿಳಾ ಪದವೀಧರಿಗೆ ಉದ್ಯಮಗಳನ್ನು ಸ್ಥಾಪಿಸಲು ಪೂರಕವಾಗುವಂತೆ ಪ್ರತಿಷ್ಠಿತ ಐಐಎಂ ಸಂಸ್ಥೆಯ ಸಹಯೋಗದೊಂದಿಗೆ ತರಬೇತಿಯನ್ನು ನೀಡಲಾಗುವುದು.

- ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ/ಯುವತಿಯರಿಗೆ ಸ್ವಾವಲಂಬಿಗಳನ್ನಾಗಿಸಲು ಟೈಲರಿಂಗ್ ಹಾಗೂ ಫ್ಯಾಷನ್ ಡಿಸೈನಿಂಗ್ ತರಬೇತಿ ಕಾರ್ಯಕ್ರಮವನ್ನು ತರಬೇತಿಯನ್ನು ನೀಡಲಾಗುವುದು.

6 ಅರಣ್ಯವಾಸಿ ಬುಡಕಟ್ಟು ಜನಾಂಗದವರಿಂದ ಸಂಗ್ರಹಿಸಲ್ಪಟ್ಟ ಕಿರುಅರಣ್ಯ ಉತ್ಪನ್ನಗಳು ಹಾಗೂ ಕರಕುಶಲ ವಸ್ತುಗಳಿಗೆ ಸ್ಪರ್ಧಾತ್ಮಕ ಬೆಲೆಯನ್ನು ದೊರಕಿಸಿಕೊಡುವ ಉದ್ದೇಶದಿಂದ ನಗರ ಪ್ರದೇಶಗಳಲ್ಲಿ ಪ್ರಸ್ತುತ ಆರ್ಥಿಕ ವರ್ಷದಲ್ಲಿ ರೂ.2.00 ಕೋಟಿಗಳ ಅನುದಾನದಲ್ಲಿ 15 ಮಾರಾಟ ಮಳಿಗೆಗಳನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಅದರಂತೆ ಮೊದಲನೇ ಹಂತದಲ್ಲಿ ಬೆಂಗಳೂರು ನಗರದ ಮಹಾತ್ಮಗಾಂಧಿ ರಸ್ತೆ ಮೆಟ್ರೋ ನಿಲ್ದಾಣ ಮತ್ತು ಬನಶಂಕರಿ ಮೆಟ್ರೋ ನಿಲ್ದಾಣಗಳಲ್ಲಿ ಮಳಿಗೆಗಳನ್ನು ಸ್ಥಾಪಿಸಲಾಗಿದೆ.

*****

## ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು 2023-24 ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳು.

1.ಸ್ವಯಂ ಉದ್ಯೋಗ ಕಾರ್ಯಕ್ರಮಗಳು:-

ಅ)ಸ್ವಯಂ ಉದ್ಯೋಗ ನೇರಸಾಲ ಯೋಜನೆ(1.0 ಲಕ್ಷ)

ಆ)ಮಹಿಳಾ ಉದ್ಯಮಶೀಲತಾ ಅಭಿವೃದ್ಧಿ ಯೋಜನೆ(2.0 ಲಕ್ಷಗಳು)

ಇ)ಸ್ವಾವಲಂಬಿ ಸಾರಥಿ ವಾಹನ ಯೋಜನೆ(4.0 ಲಕ್ಷಗಳು)

2.ಪ್ರೇರಣಾ (ಮೈಕ್ರೋ ಕ್ರೆಡಿಟ್) ಯೋಜನೆ

3.ಸಮಗ್ರ ಗಂಗಾ ಕಲ್ಯಾಣ ಯೋಜನೆ

ಅ)ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ

ಆ)ತೆರದ ಬಾವಿ ಯೋಜನೆ

ಇ)ಏತ ನೀರಾವರಿ ಯೋಜನೆ

4.ಭೂ ಒಡೆತನ ಯೋಜನೆ

5.ತರಬೇತಿ ಕಾರ್ಯಕ್ರಮ

### 1.ಸ್ವಯಂ ಉದ್ಯೋಗ ಕಾರ್ಯಕ್ರಮಗಳು .

### ಅ) ಸ್ವಯಂ ಉದ್ಯೋಗ ನೇರಸಾಲ ಯೋಜನೆ :-

ಪರಿಶಿಷ್ಟ ಪಂಗಡದ ನಿರುದ್ಯೋಗ ಯುವಕ/ಯುವತಿಯರು ಸ್ವಯಂ ಉದ್ಯೋಗ ಕೈಗೊಳ್ಳಲು ಸದರಿ ಯೋಜನೆಯ 50% ರಷ್ಟು ಗುರಿಯಲ್ಲಿ ಹೈನುಗಾರಿಕೆ ಮತ್ತು ಉಳಿದ 50%ರಷ್ಟು ಗುರಿಯಲ್ಲಿ ತರಕಾರಿ, ಹಣ್ಣುಹಂಪಲು, ಮೀನು-ಮಾಂಸ ಮಾರಾಟ, ಕುರಿ/ಹಂದಿ/ಮೊಲ ಸಾಕಾಣಿಕೆ ಮುಂತಾದ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ಮಳಿಗೆ /ತಳ್ಳುಗಾಡಿ ದುಡಿಮೆ ಬಂಡವಾಳ ಸೇರಿದಂತೆ ಇತ್ಯಾದಿ ಉದ್ದೇಶದ ಸೌಲಭ್ಯಗಳಿಗಾಗಿ ಘಟಕ ವೆಚ್ಚ ರೂ.1.00,000/-ದಲ್ಲಿ ಶೇ.50ರಷ್ಟು ಸಾಲ ಮತ್ತು ಶೇ.50ರಷ್ಟು ಸಹಾಯಧನದ ಮೂಲಕ ಅನುಷ್ಠಾನಗೊಳಿಸುವುದು. ಪ್ರಸ್ತುತ ವರ್ಷದಲ್ಲಿ ಭೌತಿಕ 1252 ಗುರಿಯನ್ನು ಹಾಗೂ ಆರ್ಥಿಕ ರೂ.12.52 ಕೋಟಿಗಳ ಗುರಿ ನಿಗಧಿಪಡಿಸಲಾಗಿದೆ. (ಸಹಾಯಧನ ರೂ.50000/- ಮತ್ತು ಸಾಲ ರೂ.50000/-ಗಳು) ಫಲಾನುಭವಿಗಳಿಗೆ 2 ಕಂತುಗಳಲ್ಲಿ ಪಾವತಿಸಲಾಗುವುದು. ಸಾಲವನ್ನು ನಿಗಮದ ಮೂಲಕ ಶೇ4 ರಷ್ಟು ಬಡ್ಡಿ ದರದಲ್ಲಿ ವಿಧಿಸಲಾಗುತ್ತದೆ.

### ಆ) ಮಹಿಳಾ ಉದ್ಯಮಶೀಲತಾ ಅಭಿವೃದ್ಧಿ ಯೋಜನೆ(2.0 ಲಕ್ಷಗಳು) .

ಪರಿಶಿಷ್ಟ ಪಂಗಡದ ನಿರುದ್ಯೋಗಿ ಮಹಿಳೆಯರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಸದರಿ ಯೋಜನೆಯ ಗುರಿಯಲ್ಲಿ ಟೈಲರಿಂಗ್. ಫ್ಯಾಷನ್ ಡಿಸೈನಿಂಗ್. ಬ್ಯೂಟಿಕ್. ಪೇಪರ್ ಪ್ಲೇಟ್

ಮೇಕಿಂಗ್. ಕೋಲ್ಡ್ ಪ್ರೆಸಿಂಗ್ ಆಯಿಲ್ ಇತ್ಯಾದಿ ಉದ್ದೇಶದ ಸೌಲಭ್ಯಗಳಿಗಾಗಿ ಗರಿಷ್ಟ ಘಟಕ ವೆಚ್ಚ ರೂ.2.00,000/-ಗಳ ಸಹಾಯಧನದ ನೀಡುವ ಮೂಲಕ ಅನುಷ್ಠಾನಗೊಳಿಸಲಾಗುವುದು. ಪ್ರಸ್ತುತ ವರ್ಷದಲ್ಲಿ 162 ಭೌತಿಕ ಗುರಿಯನ್ನು ಹಾಗೂ ರೂ.3.24 ಕೋಟಿಗಳ ಆರ್ಥಿಕ ಗುರಿ ನಿಗಧಿಪಡಿಸಲಾಗಿದೆ.

ಇ) ಸ್ವಾವಲಂಬಿ ಸಾರಥಿ ವಾಹನ ಯೋಜನೆ(4.0 ಲಕ್ಷಗಳ ಸಹಾಯಧನ).

ಪರಿಶಿಷ್ಟ ಪಂಗಡದ ನಿರುದ್ಯೋಗ ಯುವಕ/ಯುವತಿಯರು ಸ್ವಯಂ ಉದ್ಯೋಗ ಕೈಗೊಳ್ಳಲು ಸದರಿ ಯೋಜನೆಯಡಿ ಗರಿಷ್ಟ ರೂ.4.00 ಲಕ್ಷ ಸಹಾಯಧನವನ್ನು ಹಾಗೂ ಘಟ್ಕಕ ವೆಚ್ಚದ ಉಳಿದ ಭಾಗ ಬ್ಯಾಂಕ್ ಸಾಲದೊಂದಿಗೆ ಸರಕು ಸಾಗಾಣಿಕೆ ವಾಹನ ಉದ್ದೇಶದ ಜೊತೆಗೆ ಸಾರಿಗೆ ವಾಹನ, ಟ್ರಾಕ್ಟರ್ ಹಾಗೂ ಇತರೆ ವ್ಯಾಪಾರ ಉದ್ದೇಶಗಳಿಗಾಗಿ ಪ್ರಸ್ತುತ ವರ್ಷದಲ್ಲಿ 300 ಭೌತಿಕ ಗುರಿಯನ್ನು ಹಾಗೂ ರೂ.12.00 ಕೋಟಿ ಆರ್ಥಿಕ ಗುರಿ ನಿಗಧಿಪಡಿಸಲಾಗಿದೆ.

2.ಪ್ರೇರಣಾ (ಮೈಕ್ರೋ ಕ್ರೆಡಿಟ್) ಯೋಜನೆ.

- ನಿಗಮವು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರು ರಚಿಸಿಕೊಂಡಿರುವ ನೊಂದಾಯಿತ ಸ್ವಸಹಾಯ ಸಂಘದ ಸದಸ್ಯರುಗಳು ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣ ಉದ್ದೇಶಕ್ಕಾಗಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.
- ಗರಿಷ್ಟ 10 ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರನ್ನು ಹೊಂದಿರುವ ನೋಂದಾಯಿತ ಸ್ವಸಹಾಯ ಸಂಘಕ್ಕೆ ಪ್ರತಿ ಸದಸ್ಯರಿಗೆ ರೂ.15,000/- ಸಹಾಯಧನ ಮತ್ತು ರೂ.10,000/- ಸಾಲ, ಒಟ್ಟು ರೂ.25,000/- ಗಳಂತೆ ಒಂದು ಸಂಘಕ್ಕೆ ಗರಿಷ್ಟ ರೂ.2.50ಲಕ್ಷ ಅನುದಾನವನ್ನು ಒದಗಿಸಲಾಗುವುದು.
- ಸಾಲವನ್ನು ನಿಗಮದಿಂದಲೇ ನೀಡಲಾಗುತ್ತಿದ್ದು,ಇದಕ್ಕೆ ವಾರ್ಷಿಕ ಶೇ.4% ದರದಲ್ಲಿ ಬಡ್ಡಿ ವಿಧಿಸಲಾಗುತ್ತಿದ್ದು, 36 ಮಾಸಿಕ ಸಮ ಕಂತುಗಳಲ್ಲಿ ಸಾಲವನ್ನು ನಿಗಮಕ್ಕೆ ಮರುಪಾವತಿ ಮಾಡಬೇಕಾಗಿರುತ್ತದೆ.

3.ಸಮಗ್ರ ಗಂಗಾ ಕಲ್ಯಾಣ ಯೋಜನೆ

ಅ.ವೈಯಕ್ತಿಕ ಕೊಳವೆ ಬಾವಿ .

- ಪರಿಶಿಷ್ಟ ಪಂಗಡಕ್ಕೆ ಸೇರಿದ ಸಣ್ಣ ಮತ್ತು ಅತಿಸಣ್ಣ ರೈತರು ಹೊಂದಿರುವ 1 ½ ಎಕರೆಯಿಂದ 5.00 ಎಕರೆ ವರೆಗೆ ಹೊಂದಿರುವ ಖುಷ್ಕಿ ಜಮೀನಿನಲ್ಲಿ ಕೊಳವೆಬಾವಿ ಕೊರೆದು, ಪಂಪಸೆಟ್ ಸರಬರಾಜು ಮಾಡಿ, ಅಳವಡಿಸಿ ವಿದ್ಯುದ್ದೀಕರಣಗೊಳಿಸಿ, ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ.
- ಈ ಯೋಜನೆಯಡಿ ಅಂತರ್ಜಲ ಮಟ್ಟ ಕುಸಿದಿರುವ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಘಟಕ ವೆಚ್ಚರೂ. 4.75 ಲಕ್ಷವಿದ್ದು, ಇದರಲ್ಲಿ ರೂ.4.25ಲಕ್ಷ ಸಹಾಯಧನ, ರೂ.50,000/- ಅವಧಿಸಾಲವಾಗಿರುತ್ತದೆ. ರೂ.75,000/- ಗಳು ವಿದ್ಯುದ್ದೀಕರಣ ವೆಚ್ಚವಾಗಿ ಎಸ್ಕಾಂಗಳಿಗೆ ಬಿಡುಗಡೆ ಮಾಡಲಾಗುವುದು.
- ಇತರೆ 24 ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ.3.75 ಲಕ್ಷ ವಿದ್ದು, ಇದರಲ್ಲಿ ರೂ.3.25 ಲಕ್ಷ ಸಹಾಯಧನ ರೂ.50,000/- ಅವಧಿಸಾಲವಾಗಿರುತ್ತದೆ. ಸಹಾಯಧನದಲ್ಲಿ ರೂ.75,000/- ವಿದ್ಯುದ್ದೀಕರಣ ವೆಚ್ಚವಾಗಿ ಎಸ್ಕಾಂಗಳಿಗೆ ಬಿಡುಗಡೆ ಮಾಡಲಾಗುವುದು. ಸಹಾಯಧನದಲ್ಲಿ ಒಳಗೊಂಡಿರುತ್ತದೆ. ಸಹಾಯಧನದಲ್ಲಿ ಒಳಗೊಂಡಿರುತ್ತದೆ.
- 6 ಅರ್ಧ ವಾರ್ಷಿಕ ಸಮ ಕಂತುಗಳಲ್ಲಿ ಶೇ4 ರಷ್ಟು ಬಡ್ಡಿ ದರದಲ್ಲಿ ಮರು ಪಾವತಿ ಮಾಡಬೇಕಾಗಿರುತ್ತದೆ.

ಆ.ಗಂಗಾ ಕಲ್ಯಾಣ- ಏತ ನೀರಾವರಿ ಯೋಜನೆ.

ಗಂಗಾ ಕಲ್ಯಾಣ ಏತ ನೀರಾವರಿ ಯೋಜನೆಯಡಿ ನೈಸರ್ಗಿಕವಾಗ ನದಿ, ತೊರೆ, ನಾಲೆಗಳ ಅಕ್ಕಪಕ್ಕದಲ್ಲಿರುವ ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತಿ ಸಣ್ಣ ರೈತರುಗಳು ಹೊಂದಿರುವ ಜಮೀನುಗಳಿಗೆ ಪೈಪ್ ಲೈನ್ ಅಳವಡಿಸಿ, ಪಂಪ್‌ಸೆಟ್ ಸರಬರಾಜು ಮಾಡಿ ಅಳವಡಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಿ ಉಚಿತವಾಗಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು. ಈ ಯೋಜನೆಯಡಿ ಕನಿಷ್ಟ 3 ಅಥವಾ 4 ಕ್ಕಿಂತ ಹೆಚ್ಚಿನ ಫಲಾನುಭವಿ ಇದ್ದಲ್ಲಿ ಹಾಗೂ ಕನಿಷ್ಟ 8.00 ಎಕರೆಗಳಿಂದ ಗರಿಷ್ಟ 15.00 ಎಕರೆಗಳವರೆಗೆ ಹೊಂದಿರುವ ಜಮೀನಿನ ಘಟಕಕ್ಕೆ ಸಹಾಯಧನದ ಮಿತಿಯನ್ನು, ಸಾಮೂಹಿಕ ಏತ ನೀರಾವರಿ ಕಾಮಗಾರಿಗೆ ವಿದ್ಯುತ್ ಸಂಪರ್ಕ ಮತ್ತು ನಿರ್ವಹಣೆಗಾಗಿ ತಗಲುವ ರೂ.50,000/-ಗಳು ಸೇರಿದಂತೆ ಒಟ್ಟು ಗರಿಷ್ಟ ರೂ.9.00 ಲಕ್ಷಗಳ ವೆಚ್ಚದಲ್ಲಿ ಸೌಲಭ್ಯ ಕಲ್ಪಿಸಲಾಗುವುದು.

ಇ.ಸಮಗ್ರ ಗಂಗಾ ಕಲ್ಯಾಣ (ತೆರೆದಬಾವಿ) ಯೋಜನೆ.

ಮಲೆನಾಡು ಪ್ರದೇಶಗಳಾದ ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಲ್ಲಿ ಕೊಳವೆಬಾವಿ ಸೌಲಭ್ಯ ಕಲ್ಪಿಸಲು ಸಾಧ್ಯವಾಗುವುದಿಲ್ಲವೋ ಅಂತಹ ಫಲಾಪೇಕ್ಷಿಗಳ ಜಮೀನುಗಳಲ್ಲಿ ತೆರೆದಬಾವಿ ತೋಡಿ, ಡೀಸಲ್/ಮೊನೋ ಬ್ಲಾಕ್ ಪಂಪ್‌ಸೆಟ್ ಸರಬರಾಜು ಮಾಡಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲಾಗುವುದು. ಘಟಕ ವೆಚ್ಚ ರೂ.1.50 ಲಕ್ಷವಿದ್ದು, ಇದರಲ್ಲಿ ರೂ.1.00 ಲಕ್ಷ ತೆರೆದಬಾವಿ ತೊಡಲು ಮತ್ತು ರೂ.50,000/- ಪಂಪ್‌ಸೆಟ್ ಸರಬರಾಜು ಮಾಡಿ, ವಿದ್ಯುತ್ ಸಂಪರ್ಕಗೊಳಿಸಲು ವಿನಿಯೋಗಿಸಲಾಗುವುದು.

4.ಭೂ ಒಡೆತನ ಯೋಜನೆ

- ಈ ಯೋಜನೆಯಡಿ ಪರಿಶಿಷ್ಟ ಪಂಗಡದ ಭೂ ರಹಿತ ಮಹಿಳಾಕೃಷಿ ಕಾರ್ಮಿಕರನ್ನು ಭೂ ಒಡೆಯರನ್ನಾಗಿ ಮಾಡುವ ಉದ್ದೇಶ ಹೊಂದಲಾಗಿರುತ್ತದೆ. ಖರೀದಿಸುವ ಜಮೀನು ಫಲಾಪೇಕ್ಷಿಯ ವಾಸಿಸುವ ಸ್ಥಳದಿಂದ 10 ಕಿಮೀ ವ್ಯಾಪ್ತಿಯಲ್ಲಿರಬೇಕು.
- ಘಟಕ ವೆಚ್ಚದ ಮಿತಿಯೊಳಗೆ ಕನಿಷ್ಟ 2.00 ಎಕರೆ ಖುಷ್ಕಿ, 1.00 ಎಕರೆ ನೀರಾವರಿ, 1/2 ಎಕರೆ ಭಾಗಾಯ್ತು ಖರೀದಿಸಿ ಭೂ-ರಹಿತ ಮಹಿಳಾ ಕೃಷಿ ಕಾರ್ಮಿಕರ ಹೆಸರಿನಲ್ಲಿ ನೊಂದಾಯಿಸಲಾಗುವುದು.
- ಯೋಜನೆಯಡಿ ಪ್ರಸ್ತಾವನೆ ಸಲ್ಲಿಸಿ ಮಂಜೂರಾತಿಯನ್ನು ನೀಡುವ ಅಧಿಕಾರವನ್ನು ಆಯಾ ಜಿಲ್ಲೆಯಲ್ಲಿನ ಜಿಲ್ಲಾಧಿಕಾರಿಗಳಿಗೆ ನೀಡಲಾಗಿರುತ್ತದೆ.
- ಬೆಂಗಳೂರು ನಗರ ಮತ್ತು ಗ್ರಾಮಾಂತರ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಿಗೆ ಸೀಮಿತಗೊಂಡಂತೆ ಈ ಯೋಜನೆಯಡಿ ಘಟಕ ವೆಚ್ಚವನ್ನು ರೂ.25.00 ಲಕ್ಷಗಳು ಮತ್ತು ಉಳಿದ 26 ಜಿಲ್ಲೆಗಳಲ್ಲಿ ಘಟಕ ವೆಚ್ಚವನ್ನು ರೂ.20.00 ಲಕ್ಷಗಳಿಗೆ ನಿಗದಿಪಡಿಸಲಾಗಿರುತ್ತದೆ.
- ಒಟ್ಟು ಘಟಕ ವೆಚ್ಚದಲ್ಲಿ ಶೇ.50 ರಷ್ಟು ಸಹಾಯಧನ ಮತ್ತು ಶೇ.50 ರಷ್ಟು ಅವಧಿಸಾಲವಾಗಿರುತ್ತದೆ. ಅವಧಿಸಾಲವನ್ನು ನಿಗಮದಿಂದಲೇ ಭರಿಸಲಾಗುತ್ತದೆ. ಇದಕ್ಕೆ ವಾರ್ಷಿಕ ಶೇ.6ರ ದರದಲ್ಲಿ ಬಡ್ಡಿ ವಿಧಿಸಲಾಗುತ್ತದೆ. ಸಾಲ ಮತ್ತು ಬಡ್ಡಿಯನ್ನು 10

ವರ್ಷಗಳ ಅವಧಿಯಲ್ಲಿ ವಾರ್ಷಿಕ ಸಮ ಕಂತುಗಳಲ್ಲಿ ಮರುಪಾವತಿ ಮಾಡಬೇಕಾಗಿರುತ್ತದೆ.

- ಜಮೀನು ಮಾರಾಟ ಮಾಡುವ ಭೂ ಮಾಲೀಕರು ಪರಿಶಿಷ್ಟ ಪಂಗಡ ಮತ್ತು ಪರಿಶಿಷ್ಟ ಜಾತಿಗೆ ಸೇರಿದವರಾಗಿರಬಾರದು. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿರುವ ಸಮಿತಿಯು ಜಮೀನಿನ ದರವನ್ನು ನಿಗದಿಪಡಿಸುತ್ತದೆ.

5.ತರಬೇತಿ ಕಾರ್ಯಕ್ರಮ .

ಪರಿಶಿಷ್ಟ ಪಂಗಡದ ನಿರುದ್ಯೋಗಿ ಯುವಕ/ಯುವತಿಯರನ್ನು ಸ್ವಯಂ ಉದ್ಯೋಗ ಕೈಗೊಳ್ಳಲು ಅನುಕೂಲವಾಗುವಂತೆ ಕೌಶಲ್ಯಾಭಿವೃದ್ಧಿ ತರಬೇತಿ ಮತ್ತು ದೃಶ್ಯ ಮಾದ್ಯಮಕ್ಕೆ ಸಂಬಂಧಿಸಿದ ವಿಷಯಗಳ ಕುರಿತು ತರಬೇತಿಯನ್ನು ನೀಡಲು ಪ್ರಸ್ತುತ ವರ್ಷದಲ್ಲಿ 2000 ಭೌತಿಕ ಗುರಿಯನ್ನು ಹಾಗೂ ಆರ್ಥಿಕ ರೂ.10.00 ಕೋಟಿಗಳ ಆರ್ಥಿಕ ಗುರಿಯನ್ನು ನಿಗಧಿಪಡಿಸಿ ತರಬೇತಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸಲಾಗುವುದು.

# ಅನುಬಂಧ-1

## ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮವು 2024-25 ನೇ ಸಾಲಿನಲ್ಲಿ ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳು.

1. ಸ್ವಯಂ ಉದ್ಯೋಗ ಕಾರ್ಯಕ್ರಮಗಳು:-

   ಅ) ಸ್ವಯಂ ಉದ್ಯೋಗ ನೇರಸಾಲ ಯೋಜನೆ(1.0 ಲಕ್ಷ)

   ಆ) ಉದ್ಯಮಶೀಲತಾ ಅಭಿವೃದ್ಧಿ ಯೋಜನೆ(2.0 ಲಕ್ಷಗಳು)

   ಇ) ಸ್ವಾವಲಂಬಿ ಸಾರಥಿ ವಾಹನ ಯೋಜನೆ(4.0 ಲಕ್ಷಗಳು)

2. ಪ್ರೇರಣಾ (ಮೈಕ್ರೋ ಕ್ರೆಡಿಟ್) ಯೋಜನೆ

3. ಸಮಗ್ರ ಗಂಗಾ ಕಲ್ಯಾಣ ಯೋಜನೆ

   ಅ) ವೈಯಕ್ತಿಕ ನೀರಾವರಿ ಕೊಳವೆ ಬಾವಿ ಯೋಜನೆ

   ಆ) ತೆರೆದ ಬಾವಿ ಯೋಜನೆ

   ಇ) ಏತ ನೀರಾವರಿ ಯೋಜನೆ

## 1.ಸ್ವಯಂ ಉದ್ಯೋಗ ಕಾರ್ಯಕ್ರಮಗಳು .

### ಅ) ಸ್ವಯಂ ಉದ್ಯೋಗ ನೇರಸಾಲ ಯೋಜನೆ :-

ಪರಿಶಿಷ್ಟ ಪಂಗಡದ ನಿರುದ್ಯೋಗ ಯುವಕ/ಯುವತಿಯರು ಸ್ವಯಂ ಉದ್ಯೋಗ ಕೈಗೊಳ್ಳಲು ಸದರಿ ಯೋಜನೆಯ 50% ರಷ್ಟು ಗುರಿಯಲ್ಲಿ ಹೈನುಗಾರಿಕೆ ಮತ್ತು ಉಳಿದ 50% ರಷ್ಟು ಗುರಿಯಲ್ಲಿ ತರಕಾರಿ, ಹಣ್ಣುಹಂಪಲು, ಮೀನು-ಮಾಂಸ ಮಾರಾಟ, ಕುರಿ/ಹಂದಿ/ಮೊಲ ಸಾಕಾಣಿಕೆ ಮುಂತಾದ ಕಿರು ಆರ್ಥಿಕ ಚಟುವಟಿಕೆಗಳಿಗಾಗಿ ಮಳಿಗೆ /ತಳ್ಳುಗಾಡಿ ದುಡಿಮೆ ಬಂಡವಾಳ ಸೇರಿದಂತೆ ಇತ್ಯಾದಿ ಉದ್ದೇಶದ ಸೌಲಭ್ಯಗಳಿಗಾಗಿ ಘಟಕ ವೆಚ್ಚ ರೂ.1.00,000/-ದಲ್ಲಿ ಶೇ.50ರಷ್ಟು ಸಾಲ ಮತ್ತು ಶೇ.50ರಷ್ಟು ಸಹಾಯಧನದ ಮೂಲಕ ಅನುಷ್ಟಾನಗೊಳಿಸುವುದು. (ಸಹಾಯಧನ ರೂ.50000/- ಮತ್ತು ಸಾಲ ರೂ.50000/-ಗಳು) ಫಲಾನುಭವಿಗಳಿಗೆ 2 ಕಂತುಗಳಲ್ಲಿ ರೂ.25,000/-ಗಳಂತೆ ಪಾವತಿಸಲಾಗುವುದು. ಸಾಲವನ್ನು ನಿಗಮದ ಮೂಲಕ ಶೇ4 ರಷ್ಟು ಬಡ್ಡಿ ದರದಲ್ಲಿ ವಿಧಿಸಲಾಗುತ್ತದೆ.

### ಆ) ಉದ್ಯಮಶೀಲತಾ ಅಭಿವೃದ್ಧಿ ಯೋಜನೆ(2.0 ಲಕ್ಷಗಳು) .

ಪರಿಶಿಷ್ಟ ಪಂಗಡದ ನಿರುದ್ಯೋಗಿ ಮಹಿಳೆಯರಿಗೆ ಸಣ್ಣ ವ್ಯಾಪಾರ ಸಣ್ಣ ಕೈಗಾರಿಕೆ ಮತ್ತು ಸೇವಾ ಕ್ಷೇತ್ರಗಳಲ್ಲಿ ಸ್ವಯಂ ಉದ್ಯೋಗ ಘಟಕಗಳನ್ನು ಪ್ರಾರಂಭಿಸಲು ಹಾಗೂ ಸರಕು ಸಾಗಾಣಿಕೆ ವಾಹನ ಉದ್ದೇಶದ ಜೊತೆಗೆ ಸಾರಿಗೆ ವಾಹನ ಟ್ರಾಕ್ಟರ್ ಹಾಗೂ ಇತರೆ ಉದ್ದೇಶಗಳಿಗಾಗಿ ನಿಗಮದಿಂದ ಸಹಾಯಧನ ಹಾಗೂ ಬ್ಯಾಂಕಿನ ಸಾಲ ವ್ಯವಸ್ಥೆಯೊಂದಿಗೆ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತದೆ. ಘಟಕ

ವೆಚ್ಚದಲ್ಲಿ ಶೇ.70 ರಷ್ಟು ಅಥವಾ ಗರಿಷ್ಟ ರೂ.2.00,000/-ಗಳ ಸಹಾಯಧನ ನೀಡುವ ಮೂಲಕ ಅನುಷ್ಠಾನಗೊಳಿಸಲಾಗುವುದು. ಉಳಿದ ಮೊತ್ತ ಬ್ಯಾಂಕ್ ಸಾಲವಾಗಿರುತ್ತದೆ.

## ಇ) ಸ್ವಾವಲಂಬಿ ಸಾರಥಿ ವಾಹನ ಯೋಜನೆ(4.0 ಲಕ್ಷಗಳ ಸಹಾಯಧನ).

ಪರಿಶಿಷ್ಟ ಪಂಗಡದ ನಿರುದ್ಯೋಗ ಯುವಕ/ಯುವತಿಯರು ಸ್ವಯಂ ಉದ್ಯೋಗ ಕೈಗೊಳ್ಳಲು ಸದರಿ ಯೋಜನೆಯಡಿ ಗರಿಷ್ಟ ರೂ.4.00 ಲಕ್ಷ ಸಹಾಯಧನವನ್ನು ಹಾಗೂ ಘಟಕ ವೆಚ್ಚದ ಉಳಿದ ಭಾಗ ಬ್ಯಾಂಕ್ ಸಾಲದೊಂದಿಗೆ ಸರಕು ಸಾಗಾಣಿಕೆ ವಾಹನ ಉದ್ದೇಶದ ಜೊತೆಗೆ ಸಾರಿಗೆ ವಾಹನ, ಟ್ರಾಕ್ಟರ್ ಹಾಗೂ ಇತರೆ ವ್ಯಾಪಾರ ಉದ್ದೇಶಗಳಿಗಾಗಿ ನಿಗಮದಿಂದ ಸಹಾಯಧನ ಹಾಗೂ ಬ್ಯಾಂಕಿನ ಸಾಲ ವ್ಯವಸ್ಥೆಯೊಂದಿಗೆ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತದೆ.

## 2.ಪ್ರೇರಣಾ (ಮೈಕ್ರೋ ಕ್ರೆಡಿಟ್) ಯೋಜನೆ.

- ನಿಗಮವು ಪರಿಶಿಷ್ಟ ಪಂಗಡಕ್ಕೆ ಸೇರಿದ ಮಹಿಳೆಯರು ರಚಿಸಿಕೊಂಡಿರುವ ನೊಂದಾಯಿತ ಸ್ವಸಹಾಯ ಸಂಘದ ಸದಸ್ಯರುಗಳು ಆರ್ಥಿಕ ಸ್ವಾವಲಂಬನೆ ಮತ್ತು ಸಬಲೀಕರಣ ಉದ್ದೇಶಕ್ಕಾಗಿ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ.

- ಗರಿಷ್ಟ 10 ಪರಿಶಿಷ್ಟ ಪಂಗಡದ ಮಹಿಳಾ ಸದಸ್ಯರನ್ನು ಹೊಂದಿರುವ ನೋಂದಾಯಿತ ಸ್ವಸಹಾಯ ಸಂಘಕ್ಕೆ ಪ್ರತಿ ಸದಸ್ಯರಿಗೆ ರೂ.15,000/- ಸಹಾಯಧನ ಮತ್ತು ರೂ.10,000/- ಸಾಲ, ಒಟ್ಟು ರೂ.25,000/- ಗಳಂತೆ ಒಂದು ಸಂಘಕ್ಕೆ ಗರಿಷ್ಟ ರೂ.2.50ಲಕ್ಷ ಅನುದಾನವನ್ನು ಒದಗಿಸಲಾಗುವುದು. ಪ್ರಸಕ್ತ ಸಾಲಿನಿಂದ ಪ್ರತಿ ಸದಸ್ಯರಿಗೆ ರೂ.25,000/- ಸಹಾಯಧನ ಮತ್ತು ರೂ.25,000/- ಸಾಲ, ಒಟ್ಟು ರೂ. 50,000/- ಗಳಂತೆ ಒಂದು ಸಂಘಕ್ಕೆ ಗರಿಷ್ಟ ರೂ.5.00 ಲಕ್ಷ ಅನುದಾನವನ್ನು ಒದಗಿಸಲಾಗುವುದು.

- ಸಾಲವನ್ನು ನಿಗಮದಿಂದಲೇ ನೀಡಲಾಗುತ್ತಿದ್ದು,ಇದಕ್ಕೆ ವಾರ್ಷಿಕ ಶೇ.4% ದರದಲ್ಲಿ ಬಡ್ಡಿ ವಿಧಿಸಲಾಗುತ್ತಿದ್ದು, 36 ಮಾಸಿಕ ಸಮ ಕಂತುಗಳಲ್ಲಿ ಸಾಲವನ್ನು ನಿಗಮಕ್ಕೆ ಮರುಪಾವತಿ ಮಾಡಬೇಕಾಗಿರುತ್ತದೆ.

## 3.ಸಮಗ್ರ ಗಂಗಾ ಕಲ್ಯಾಣ ಯೋಜನೆ

### ಅ)ವೈಯಕ್ತಿಕ ಕೊಳವೆ ಬಾವಿ .

- ಪರಿಶಿಷ್ಟ ಪಂಗಡಕ್ಕೆ ಸೇರಿದ ಸಣ್ಣ ಮತ್ತು ಅತಿಸಣ್ಣ ರೈತರು ಹೊಂದಿರುವ 1 ½ ಎಕರೆಯಿಂದ 5.00 ಎಕರೆ ವರೆಗೆ ಹೊಂದಿರುವ ಖುಷ್ಕಿ ಜಮೀನಿನಲ್ಲಿ ಕೊಳವೆಬಾವಿ ಕೊರೆದು, ಪಂಪಸೆಟ್ ಸರಬರಾಜು ಮಾಡಿ, ಅಳವಡಿಸಿ ವಿದ್ಯುದ್ದೀಕರಣಗೊಳಿಸಿ, ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ.

- ಈ ಯೋಜನೆಯಡಿ ಅಂತರ್ಜಲ ಮಟ್ಟ ಕುಸಿದಿರುವ ಜಿಲ್ಲೆಗಳಾದ ಕೋಲಾರ, ಚಿಕ್ಕಬಳ್ಳಾಪುರ, ತುಮಕೂರು, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರ ಜಿಲ್ಲೆಗಳಲ್ಲಿ ಘಟಕ ವೆಚ್ಚರೂ. 4.75 ಲಕ್ಷವಿದ್ದು, ಇದರಲ್ಲಿ ರೂ.4.25ಲಕ್ಷ ಸಹಾಯಧನ, ರೂ.50,000/-

ಅವಧಿಸಾಲವಾಗಿರುತ್ತದೆ. ರೂ.75,000/-ಗಳು ವಿದ್ಯುದ್ದೀಕರಣ ವೆಚ್ಚವಾಗಿ ಎಸ್ಕಾಂಗಳಿಗೆ ಬಿಡುಗಡೆ ಮಾಡಲಾಗುವುದು.

- ಇತರೆ 24 ಜಿಲ್ಲೆಗಳಲ್ಲಿ ಘಟಕ ವೆಚ್ಚ ರೂ.3.75 ಲಕ್ಷ ವಿದ್ದು, ಇದರಲ್ಲಿ ರೂ.3.25 ಲಕ್ಷ ಸಹಾಯಧನ ರೂ.50,000/- ಅವಧಿಸಾಲವಾಗಿರುತ್ತದೆ. ಸಹಾಯಧನದಲ್ಲಿ ರೂ.75,000/- ವಿದ್ಯುದ್ದೀಕರಣ ವೆಚ್ಚವಾಗಿ ಎಸ್ಕಾಂಗಳಿಗೆ ಬಿಡುಗಡೆ ಮಾಡಲಾಗುವುದು. ಸಹಾಯಧನದಲ್ಲಿ ಒಳಗೊಂಡಿರುತ್ತದೆ. ಸಹಾಯಧನದಲ್ಲಿ ಒಳಗೊಂಡಿರುತ್ತದೆ.

- 6 ಅರ್ಧ ವಾರ್ಷಿಕ ಸಮ ಕಂತುಗಳಲ್ಲಿ ಶೇ4 ರಷ್ಟು ಬಡ್ಡಿ ದರದಲ್ಲಿ ಮರು ಪಾವತಿ ಮಾಡಬೇಕಾಗಿರುತ್ತದೆ.

## ಆ) ಗಂಗಾ ಕಲ್ಯಾಣ- ಏತ ನೀರಾವರಿ ಯೋಜನೆ.

ಗಂಗಾ ಕಲ್ಯಾಣ ಏತ ನೀರಾವರಿ ಯೋಜನೆಯಡಿ ನೈಸರ್ಗಿಕವಾದ ನದಿ, ತೊರೆ, ನಾಲೆಗಳ ಅಕ್ಕಪಕ್ಕದಲ್ಲಿರುವ ಪರಿಶಿಷ್ಟ ಪಂಗಡದ ಸಣ್ಣ ಮತ್ತು ಅತಿ ಸಣ್ಣ ರೈತರುಗಳು ಹೊಂದಿರುವ ಜಮೀನುಗಳಿಗೆ ಪೈಪ್ ಲೈನ್ ಅಳವಡಿಸಿ, ಪಂಪ್‌ಸೆಟ್ ಸರಬರಾಜು ಮಾಡಿ ಅಳವಡಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಿ ಉಚಿತವಾಗಿ ನೀರಾವರಿ ಸೌಲಭ್ಯವನ್ನು ಒದಗಿಸಲಾಗುವುದು. ಈ ಯೋಜನೆಯಡಿ ಕನಿಷ್ಟ 3 ಅಥವಾ 4 ಕ್ಕಿಂತ ಹೆಚ್ಚಿನ ಫಲಾನುಭವಿ ಇದ್ದಲ್ಲಿ ಹಾಗೂ ಕನಿಷ್ಟ 8.00 ಎಕರೆಗಳಿಂದ ಗರಿಷ್ಟ 15.00 ಎಕರೆಗಳವರೆಗೆ ಹೊಂದಿರುವ ಜಮೀನಿನ ಘಟಕಕ್ಕೆ ಸಹಾಯಧನದ ಮಿತಿಯನ್ನು, ಸಾಮೂಹಿಕ ಏತ ನೀರಾವರಿ ಕಾಮಗಾರಿಗೆ ವಿದ್ಯುತ್ ಸಂಪರ್ಕ ಮತ್ತು

ನಿರ್ವಹಣೆಗಾಗಿ ತಗಲುವ ರೂ.50,000/-ಗಳು ಸೇರಿದಂತೆ ಒಟ್ಟು ಗರಿಷ್ಟ ರೂ.9.00 ಲಕ್ಷಗಳ ವೆಚ್ಚದಲ್ಲಿ ಸೌಲಭ್ಯ ಕಲ್ಪಿಸಲಾಗುವುದು.

## ಇ) ಸಮಗ್ರ ಗಂಗಾ ಕಲ್ಯಾಣ (ತೆರೆದಬಾವಿ) ಯೋಜನೆ.

ಮಲೆನಾಡು ಪ್ರದೇಶಗಳಾದ ಕೊಡಗು, ಶಿವಮೊಗ್ಗ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳಲ್ಲಿ ಎಲ್ಲಿ ಕೊಳವೆಬಾವಿ ಸೌಲಭ್ಯ ಕಲ್ಪಿಸಲು ಸಾಧ್ಯವಾಗುವುದಿಲ್ಲವೋ ಅಂತಹ ಫಲಾಪೇಕ್ಷಿಗಳ ಜಮೀನುಗಳಲ್ಲಿ ತೆರೆದಬಾವಿ ತೋಡಿ, ಡೀಸಲ್/ಮೊನೋ ಬ್ಲಾಕ್ ಪಂಪ್‌ಸೆಟ್ ಸರಬರಾಜು ಮಾಡಿಸಿ, ವಿದ್ಯುತ್ ಸಂಪರ್ಕ ಕಲ್ಪಿಸಿಕೊಡಲಾಗುವುದು. ಘಟಕ ವೆಚ್ಚ ರೂ.1.50 ಲಕ್ಷವಿದ್ದು, ಇದರಲ್ಲಿ ರೂ.1.00 ಲಕ್ಷ ತೆರೆದಬಾವಿ ತೊಡಲು ಮತ್ತು ರೂ.50,000/- ಪಂಪ್‌ಸೆಟ್ ಸರಬರಾಜು ಮಾಡಿ, ವಿದ್ಯುತ್ ಸಂಪರ್ಕಗೊಳಿಸಲು ವಿನಿಯೋಗಿಸಲಾಗುವುದು.